Licence No. 60.
Licenced to Post without Prepayment

Reg. No. M. 1330.
'KODAGU' MERCARA. (Coorg).

ಕೊಡಗು

ಎಡಿಟರುಗಳು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೨-೦-೦.

ಸಂಪುಟ ೩೦ | ತಾರೀಕು ೭-೧೦-೧೯೫೯ನೇ ಬುಧವಾರ | ಸಂಚಿಕೆ ೨೭

ಪ್ರತ್ಯೇಕವಾದಿಗಳು ಕಾಂಗ್ರೆಸ್ಸಿಗೆ

ರಾಜೀನಾಮೆ ಕೊಟ್ಟದ್ದೇಕೆ ?

ಅ. ಭಾ. ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹರ್ ಲಾಲ್ ನೆಹರೂರವರಿಗೂ—ಕೊಡಗಿನ ಪ್ರತ್ಯೇಕ ಪಕ್ಷದ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರಿಗೂ ನಡೆದ ಪತ್ರವ್ಯವಹಾರಗಳು.

ಪ್ರಥಮ ಪತ್ರ.

ಮಡಿಕೇರಿ,
೧೭-೮-೫೧

ಪ್ರಿಯ ಪಂಡಿತಜಿಯವರೇ,

ನಿಮಗೆ ವಿಪರೀತ ಕೆಲಸವಿದ್ದುವ ಈ ಸಮಯದಲ್ಲಿ ತೊಂದರೆ ಕೊಡಲು ನನಗೆ ಇಚ್ಛೆ ಇಲ್ಲದಿದ್ದರೂ, ಕೊಡಗಿನ ಜನರಿಗೆ ಬಹು ತುರಿತ ಮತ್ತು ಪ್ರಾಮುಖ್ಯವಾದ ಒಂದು ವಿಚಾರದಲ್ಲಿ ನಿಮ್ಮ ಬುದ್ಧಿವಾದವನ್ನು ಕೇಳದೆ ಸಾಧ್ಯವಿಲ್ಲ. ಬರುವ ಜನರಲ್ ಚುನಾವಣೆಯ ಸಂಬಂಧ ನಮ್ಮ ಪರಿಸ್ಥಿತಿಯು ಎಷ್ಟು ಬಿಕ್ಕಟ್ಟಾಗಿದೆ ಎಂಬುದು ಇದರೊಂದಿಗೆ ಕಳುಹಿಸಿರುವ–ನಾವು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೊಟ್ಟ ಅಪ್ಪೀಲಿನಿಂದ ವಿಷದವಾಗುವುದು. ಕಾಂಗ್ರೆಸಿನ ಆಶ್ರಯದಲ್ಲಿ ಎರಡು ಪಂಗಡದ ಉಮೇದುವಾರರುಗಳನ್ನು ನಿಲ್ಲಿಸಲು ಸಾಧ್ಯವಿಲ್ಲವಾದರೆ, ನಮ್ಮ ಸಮಸ್ಯೆಯನ್ನು ಬಿಡಿಸಲು ಇರುವುದು ಒಂದೇ ದಾರಿ. ಅದೇನೆಂದರೆ–ಕೊಡಗಿನ ಕಾಂಗ್ರೆಸಿಗರು ಚುನಾವಣೆಯಲ್ಲಿ ಗೆದ್ದ ನಂತರ ಕಾಂಗ್ರೆಸು ಎಸೆಂಬ್ಲಿ ಪಾರ್ಟಿಯ ಮೆಂಬರುಗಳಾಗಿರುವೆವೆಂದು ಪ್ರತಿಜ್ಞೆಗೆ ಸಹಿ ಮಾಡಿಸಿ ತಮ್ಮ ತಮ್ಮ ಸಂಯೋಜನೆ ಮತ್ತು ಪ್ರತ್ಯೇಕ ಪ್ರಶ್ನೆಗಳ ಮೇಲೆ ಚುನಾವಣೆಗೆ ನಿಲ್ಲಲು ಬಿಡುವದು. ಹೀಗೆ ಮಾಡಿದರೆ ಇಲ್ಲಿಯ ಜನರಿಗೆ ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡಲು ಅನುಕೂಲ ಮಾಡಿಕೊಟ್ಟಂತಾಗುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ನಮ್ಮ ಅಪೀಲಿಗೆ ಇನ್ನೂ ಯಾವುದೊಂದು ಜವಾಬು ಬಂದಿರುವುದಿಲ್ಲ ಮತ್ತು ಬೇಗನೆ ಜವಾಬು ಸಿಕ್ಕುವುದೆಂದು ನಂಬಲಾಗುವುದಿಲ್ಲ. ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ.. ಕಾ. ಕ. ಯವರಿಗೆ ಈ ತಾರೀಕು ೨೫ ಒಳಗೆ ಕಳುಹಿಸಬೇಕಾದುದರಿಂದ ಈ ವಿಚಾರದಲ್ಲಿ ನಾವು ಕೈಕೊಳ್ಳಬಹುದಾದ ಉತ್ತಮ ದಾರಿಯು ಯಾವುದೆಂಬುದನ್ನು ದಯವಿಟ್ಟು ತಿಳಿಸಿ.

ವಂದನೆಗಳಿಂದ ನಿಮ್ಮವನಾದ
ಪಿ ಐ. ಬೆಳ್ಯಪ್ಪ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕಳುಹಿಸಿದ ಅಪ್ಪೀಲು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧ್ಯಕ್ಷರು ಮತ್ತು ಮೆಂಬರುಗಳಿಗೆ–

ಹುಬ್ಬಳ್ಳಿ, ಕ. ಪ್ರಾ. ಕಾ. ಕಮಿಟಿಯ ಅಧ್ಯಕ್ಷರ ಮೂಲಕ–

ಪ್ರಿಯ ಮಿತ್ರರೇ,

ಈ ಕೆಳಗೆ ಸಹಿ ಮಾಡಿದ ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸ್ ಕೆಲಸಗಾರರಾದ ನಾವು ಕಳೆದ ಕಾಂಗ್ರೆಸ್ ಚುನಾವಣೆಗಳು ಮತ್ತು ಬರುವ ಜನರಲ್ ಚುನಾವಣೆಗೂ ಕೊಡಗಿನ ಭವಿಷ್ಯತ್ತಿಗೂ ಇರುವ ಸಂಬಂಧವನ್ನು ಕುರಿತ ಕೆಲವು ತೊಂದರೆಗಳನ್ನು ನಿಮ್ಮ ವಿಮರ್ಶೆ ಮತ್ತು ತೀರ್ಮಾನದ ಬಗ್ಗೆ ನಿಮ್ಮ ಮುಂದೆ ಇಡುವವರಾಗಿದ್ದೇವೆ.

೨. ಕೊಡಗು ೧೫೯೩ ಚದರ ಮೈಲಿ ಮತ್ತು ೨,೩೦,೦೦೦ ಜನಸಂಖ್ಯೆಯಿಂದ ಕೂಡಿ ದಕ್ಷಿಣ ಹಿಂದೂಸ್ಥಾನದಲ್ಲಿರುವ, ಎಲ್ಲದಕ್ಕಿಂತಲೂ ಹಳೆಯದಾದ ಚೀಫ್ ಕಮಿಷನರ ಪ್ರಾಂತವಾಗಿದೆ. ಎಲ್ಲಾ ಚೀಫ್ ಕಮಿಷನರ ಪ್ರಾಂತ್ಯಗಳ ಪೈಕಿ ಪ್ರತ್ಯೇಕ ಬಜೆಟ್ ಇದ್ದು ಆರ್ಥಿಕ ವಿಚಾರದಲ್ಲಿ ತನ್ನ ಕಾಲಿನ ಮೇಲೆ ನಿಲ್ಲಲು ಶಕ್ತಿ ಇರುವ ಮತ್ತು ಕಳೆದ ೨೭ ವರ್ಷಗಳಿಂದ ನ್ಯಾಯವಿಧಾಯಕ ಸಭೆಯ ಅನುಭವವಿರುವ ಪ್ರಾಂತ್ಯ ಇದು ಒಂದೆ.

೩. ಹಿಂದೂದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವ ವರೆಗೆ ಈ ಪ್ರಾಂತ್ಯದ ಹಳೆ ಕಾಂಗ್ರೆಸ್ ಕೆಲಸಗಾರರು ಹೋರಾಟವನ್ನು ಒಗ್ಗಟ್ಟಿನಲ್ಲಿ ಸಾಗಿಸುತ್ತ ಬಂದರು. ಆದರೆ ಸ್ವಾತಂತ್ರ್ಯ ದೊರೆತ ಮೇಲೆ ಕೊಡಗಿನ ಭವಿಷ್ಯತ್ತಿನ ವಿಷಯವಾಗಿ ಜನತೆಯಲ್ಲಿಯೂ ಹಾಗೂ ಕಾಂಗ್ರೆಸ್ ಕೆಲಸಗಾರರಲ್ಲಿಯೂ ಭಿನ್ನಾಭಿಪ್ರಾಯವು ತೋರಲಾರಂಭಿಸಿತು. ಒಂದು ಪಂಗಡವು ಸಂಪೂರ್ಣ ಸುಧಾರಣೆಗಳಿಂದ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದೂ, ಇನ್ನೊಂದು ಪಂಗಡವು ಕೊಡಗನ್ನು ಮೈಸೂರು ಯೂ ಮುಂದೆ ಆಗಬಹುದಾದ ಕರ್ನಾಟಕ ಪ್ರಾಂತ್ಯದೊಂದಿಗೆ ಸಂಯೋಜಿಸಬೇಕೆಂದೂ ಪ್ರಯತ್ನಿಸುತ್ತಿವೆ.

ಕ. ಪ್ರಾ. ಕಾ. ಕಮಿಟಿಯವರು ಕೊಡಗು ಸಂಯೋಜನೆಯಾಗಬೇಕೆಂಬ ನಿರ್ಧಾರದವರಾದುದರಿಂದ ಅದರ ಕೈಕೆಳಗಿರುವ ನಮ್ಮ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಂಯೋಜನಾಪಕ್ಷದವರಿಗೆ ಪ್ರಾರಂಭದಿಂದಲೆಂಬೆಬಲಕೊಡುತ್ತಾ ಬಂದಿದೆ. ಕ. ಪ್ರಾ. ಕಾ. ಕಮಿಟಿಯವರು ಕೆಲವು ಕಾರಣಗಳಿಂದ ಕೊಡಗಿನ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಅದು ಮುಕ್ಕಾಲು ಪಾಲು ಮೆಂಬರುಗಳು ಬಹುಮತದಿಂದ ಸಂಯೋಜನೆಯನ್ನು ವಿರೋಧಿಸಿದ ಕಾರಣ ೧೯೪೬ರಲ್ಲಿ ರದ್ದು ಮಾಡಿ ಹೆಚ್ಚಾಗಿ ಸಂಯೋಜನಾವಾದಿಗಳಿಂದಲೇ ಕೂಡಿದ ಒಂದು ಏಡ್‌ಹಾಕ್ ಕಮಿಟಿಯನ್ನು ನೇಮಿಸಿ, ಇದನ್ನು ವಿಷದಪಡಿಸಿದರು. ಈ ಏಡ್‌ಹಾಕ್ ಕಮಿಟಿಯನ್ನು ಒಂದು ವರ್ಷದ ವರೆಗೆ ಮಾತ್ರ ನೇಮಿಸಿದ್ದರೂ ನಾವು ಹಲವು ಸಾರಿ ಆಕ್ಷೇಪಿಸಿದನ್ನು ಗಮನಿಸದೆ ಅದನ್ನು ಕಳೆದ ಸಾರಿ ೧೯೫೦ರಲ್ಲಿ ನಡೆದ ಚುನಾವಣೆ ವರೆಗೆ ಮುಂದರಿಸಲು ಬಿಟ್ಟರು. ಈ ಏಡ್‌ಹಾಕ್ ಸಮಿತಿಯು ತಮ್ಮ ಅಧಿಕಾರವನ್ನು ಉಪಯೋಗಿಸುತ್ತಾ ಪ್ರತ್ಯೇಕ ಪಕ್ಷದ ಕೆಲಸಗಾರರು ಕಾಂಗ್ರೆಸು ಮೆಂಬರುಗಳಾಗುವುದಕ್ಕೂ, ಕಾಂಗ್ರೆಸು ಕಮಿಟಿಯ ಸದಸ್ಯರುಗಳಾಗುವದಕ್ಕೂ ತುಂಬಾ ಅಡಚಣೆಗಳನ್ನು ತಂದು ಒಡ್ಡಿದರು. ಇದರಿಂದ ಕಾಂಗ್ರೆಸ್ಸು ಕಮಿಟಿಯ ಚುನಾವಣೆಗಳಲ್ಲಿ ಭಾಗವಹಿಸಲು, ನಮಗೆ ಸಾಧ್ಯವಾಗಲಿಲ್ಲ. ಈ ವಿಚಾರಗಳನ್ನೆಲ್ಲ ಆಗಿಂದಾಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ತಿಳಿಸುತ್ತ ಬಂದಿರುವೆವು. ಒಂದೆರಡು ಸಾರಿ ನಮ್ಮ ಅಪೀಲುಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಮ್ಮ ಕೋರಿಕೆಗೆ ವಿರುದ್ಧವಾಗಿ ಕ. ಪ್ರಾ. ಕಾ. ಕಮಿಟಿಗೆ ವಿಚಾರಣೆ ಬಗ್ಗೆ ಕಳುಹಿಸಿದ್ದರು. ನಾವು ನಿರೀಕ್ಷಣೆ ಮಾಡಿದಂತೆ ಅವರ ತೀರ್ಮಾನಗಳು ನಮಗೆ ವಿರುದ್ಧವಾಗಿಯೂ, ಸಂಯೋಜನಾಪಕ್ಷಕ್ಕೆ ಪೂರ್ಣ ಸಹಾಯಕವಾಗಿಯೂ ಇದ್ದವು. ನಾವು ಕಡೆಯದಾಗಿ ತಾ. ೧೯-೨-೫೧ರಲ್ಲಿ ಕಳುಹಿಸಿದ ಅಪ್ಪೀಲು ಕೇಂದ್ರ ಇಲೆಕ್ಷನ್ಸ್ ಟ್ರಿಬ್ಯುನಲ್ಸ್‌ನ ಮುಂದೆ ವಿಚಾರವಾಗದೆ ಹಾಗೆಯೇ ಇದೆ. ಈ ಮಧ್ಯೆ ಜನರಲ್ ಚುನಾವಣೆಯು ನಿಮಗೆ ಗೊತ್ತಿರುವಂತೆ ಬಹು ಸಮೀಪಿಸುತ್ತಿದೆ. ಮುಂಬರುವ ಚುನಾವಣೆಯಲ್ಲಿ ನಮ್ಮ ವರ್ತನೆ ಹೇಗಿರಬೇಕೆಂಬುದು ನಮಗೆ ಗೊತ್ತಾಗುವುದಿಲ್ಲ. ಕೊಡಗಿನ ಭವಿಷ್ಯತ್ತನ್ನು ನಿಶ್ಚಯಿಸಲು ಇದೀಗ ಬಹು ಉತ್ತಮವಾದ ಸಂದರ್ಭವಾಗಿದೆ. ಹೀಗಿರುವ ಸ್ಥಿತಿಯಲ್ಲಿ ಕೊಡಗಿನ ಜಿಲ್ಲಾ ಸಮಿತಿಯಲ್ಲಿ ಬರೇ ಸಂಯೋಜನಾವಾದಿಗಳೇ ಇರುವದರಿಂದ ನಮ್ಮ ಪಾರ್ಟಿಗೆ ಹಾನಿಯಾಗುವ ರೀತಿಯಲ್ಲಿ ಸ್ಥಳೀಯ ಎಸೆಂಬ್ಲಿಗೂ ಮತ್ತು ಪಾರ್ಲಿಮೆಂಟಿಗೂ ತಮ್ಮ ಪಕ್ಷದ ಉಮೇದುವಾರರುಗಳನ್ನೇ ಸ್ವಾಭಾವಿಕವಾಗಿ ಹಾಕುವರು. ಜಿಲ್ಲಾ ಕಾಂಗ್ರೆಸ್ ಸಮಿತಿಯು ತಮ್ಮ ಪಕ್ಷದ ಉಮೇದ್ವಾರರುಗಳನ್ನೇ ಹಾಕಿದರೆ, ಕಾಂಗ್ರೆಸ್ ಕೆಲಸಗಾರರಲ್ಲಿ ದೀರ್ಘ ಕಾಲದಿಂದಲೇ ಬಲವಾದ ಭಿನ್ನಾಭಿಪ್ರಾಯವಿರುವ ಕೊಡಗಿನ ಭವಿಷ್ಯತ್ತಿನ ವಿಚಾರ ಇಲ್ಲಿಯ ಜನರಿಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಲು ಕಾಂಗ್ರೆಸ್ ಅವಕಾಶ ಕೊಡದಂತೆ ಆಗುವುದು.

೪. ಮೇಲಿನ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಗೆಹರಿಸಲು ನಿಮ್ಮ ಆಲೋಚನೆ ಬಗ್ಗೆ ಈ ಕೆಳಗಿನ ಸೂಚನೆಗಳನ್ನು ಕೊಡುವೆವು. (೧) ಕೊಡಗಿನಲ್ಲಿರುವ ಎರಡು ಕಾಂಗ್ರೆಸ್ ಪಂಗಡಗಳು ತಮ್ಮ ಎರಡು ಸಾಲು ಉಮೇದುವಾರರುಗಳನ್ನು ಹಾಕಲು ಬಿಡಬೇಕು. (೨) ಮೇಲಿನ ಸೂಚನೆಯು ಒಪ್ಪಿತದಲ್ಲವಾದರೆ ಕಾಂಗ್ರೆಸ್ ತನ್ನ ಹೆಸರಿನಲ್ಲಿ ಉಮೇದ್ವಾರರುಗಳನ್ನು ಹಾಕದೆ ಕಾಂಗ್ರೆಸ್ ಕೆಲಸಗಾರರು ಸಂಯೋಜನೆ ಮತ್ತು ಪ್ರತ್ಯೇಕತ್ವದ ಪ್ರಶ್ನೆಯ ಮೇಲೆ ಚುನಾವಣೆ ನಿಲ್ಲುವಂತೆ ಬಿಡಬೇಕು. ಆದರೆ ಹೀಗೆ ನಿಲ್ಲುವ ಕಾಂಗ್ರೆಸ್ ಮೆಂಬರುಗಳು ಚುನಾವಣೆ ಮುಗಿದನಂತರ ಎಸೆಂಬ್ಲಿಯಲ್ಲಿ ಕಾಂಗ್ರೆಸು ಪಾರ್ಟಿಯ ಮೆಂಬರುಗಳಾಗಿ ಇರುವೆವೆಂದು ಪ್ರತಿಜ್ಞೆಗೆ ಸಹಿ ಹಾಕಬೇಕು.

೫ ಅಂತ್ಯದಲ್ಲಿ ನಮ್ಮ ಮುಂದಿರುವ ವಿಶೇಷ ಸಮಸ್ಯೆಯನ್ನು ಬಿಡಿಸಲು ಸಹಾಯ ಮಾಡಬೇಕಾಗಿ ಕೋರುತ್ತೇವೆ.

೧೫ ಕಾಂಗ್ರೆಸ್ ಕೆಲಸಗಾರರು.

ಮಡಿಕೇರಿ, ೩೧-೭-೫೧.

ಪಂಡಿತಜೀಯವರ ಜವಾಬು.

ನ್ಯೂಡೆಲ್ಲಿ,
೨೪-೮-೫೧.

ಪ್ರಿಯ ಬೆಳ್ಯಪ್ಪನವರೆ,

ನಿಮ್ಮ ತಾ. ೧೭-೮-೫೧ ರ ಪತ್ರ ಕೈ ಸೇರಿದೆ ನಾನು ಈಗ ಕಾಂಗ್ರೆಸು ವರ್ಕಿಂಗ್ ಕಮಿಟಿ ಯೂ ಇಲಕ್ಷನ್ ಕಮಿಟಿಯಲ್ಲಿ ಇಲ್ಲದಿರುವುದರಿಂದ ಈಗ ಈ ವಿಚಾರದಲ್ಲಿ ನನಗೇನೂ ಮಾಡಲು ಸಾಧ್ಯವಿಲ್ಲ. ನಿಮ್ಮ ತೊಂದರೆಯು ನನಗೆ ಮನವರಿಕೆಯಾಗಿದೆ. ಹ್ಯಾಗೂ ಇನ್ನೂ ತುಂಬಾ ಸಮಯವಿದೆ. ಈಗ ನೇಮಕ ಪತ್ರಗಳನ್ನು ಕಳುಹಿಸಿ ನಂತರ ಈ ವಿಚಾರವನ್ನು ತೀರ್ಮಾನಿಸಿಕೊಳ್ಳುವುದು ಉತ್ತಮ.

ನಿಮ್ಮವನಾದ
ಜವಾಹರಲಾಲ್ ನೆಹರು.

ಸೆಪ್ಟಂಬರು ಎರಡನೇ ವಾರದಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರು ಡೆಲ್ಲಿಗೆ ಹೋಗಿ ತಾ. ೧೩-೯-೫೧ ರಲ್ಲಿ ಪಂಡಿತಜೀಯವರನ್ನು ಭೇಟಿಮಾಡಿ ಚುನಾವಣೆ ಸಂಬಂಧ ಸಂಭಾಷಣೆಯನ್ನು ನಡೆಸಿದರು. ಆದರ ಸಾರಾಂಶವನ್ನು ಮರುದಿನ ಪಂಡಿತಜೀಯವರಿಗೆ ಬರೆದು ಕಳುಹಿಸಿದ ಪತ್ರ.

ಎರಡನೇ ಪತ್ರ.

ನ್ಯೂಡೆಲ್ಲಿ.
ತಾ. ೧೪-೯-೫೧.

ಪ್ರಿಯ ಪಂಡಿತಜೀಯವರೇ,

ನೀವು ದಯವಿಟ್ಟು ನಿನ್ನೆ ದಿನ ನನಗೆ ಸಂಭಾಷಣೆಗೆ ಅವಕಾಶ ಕೊಟ್ಟದಕ್ಕೆ ತುಂಬಾ ವಂದಿಸುತ್ತೇನೆ. ಹಾಗೆ ವಂದಿಸುವಾಗ್ಯೆ ಮುಂಬರುವ ಚುನಾವಣೆ ಸಂಬಂಧ ನಿಮ್ಮ ಮುಂದೆ ನಾನು ಇಟ್ಟ ವಿಚಾರಗಳನ್ನು ನಿಮಗೆ ಪುನ ಜ್ಞಾಪಿಸಲು ಇಚ್ಛಿಸುತ್ತೇನೆ.

ಕೊಡಗಿನ ಕಾಂಗ್ರೆಸು ಕೆಲಸಗಾರರಲ್ಲಿ ಎರಡು ಪಂಗಡಗಳಿವೆ; ಒಂದು ಪಂಗಡವು ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದೂ, ಇನ್ನೊಂದು ಪಂಗಡವು ಕೊಡಗನ್ನು ಮೈಸೂರು ಯೂ ಮುಂದಿನ ಕರ್ನಾಟಕ ಪ್ರಾಂತ್ಯದೊಂದಿಗೆ ಸಂಯೋಜಿಸಬೇಕೆಂದೂ ಪ್ರಯತ್ನಿಸುತ್ತಿವೆ. ನಮ್ಮ ಜಿಲ್ಲಾ ಕಾಂಗ್ರೆಸು ಕಮಿಟಿಯು ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಅಧೀನದಲ್ಲಿರುವ

ದಾಗಿದೆ. ಕೊಡಗಿನ ಜಿಲ್ಲಾ ಕಾಂಗ್ರೆಸು ಕಮಿಟಿಯು ಅದರ ಚುನಾವಣೆಯಲ್ಲಿ ಕ್ರಮವನ್ನುಸರಿಸಿದ ಕಾರಣ ನಾವು, ಪ್ರತ್ಯೇಕವಾದಿಗಳು ಅದರೊಂದಿಗೆ ಅಸಹಕಾರ ಮಾಡಬೇಕಾಗಿ ಬಂತು. ಆದುದರಿಂದ ಸದರಿ ಸಮಿತಿಯಲ್ಲಿ ಸಂಯೋಜನಾವಾದಿಗಳು ಮಾತ್ರ ಮೆಂಬರುಗಳಾಗಿರುವರು. ಈ ವಿಚಾರ ನಾವು ಕೇಂದ್ರ ಚುನಾವಣಾ ಟ್ರಿಬ್ಯೂನಲ್ಲಿಗೆ ತಾ. ೧೯-೨-೫೧ ರಲ್ಲಿ ಕಳುಹಿಸಿದ ಅಪೀಲನ್ನು ಇನ್ನೂ ವಿಚಾರಿಸಿರುವುದಿಲ್ಲ. ಕೊಡಗಿನ ಸಂಯೋಜನ ವಿಷಯದಲ್ಲಿ ತುಂಬಾ ಕುತೂಹಲದಲ್ಲಿರುವ ಕರ್ನಾಟಕ ಪ್ರಾಂತೀಕ ಕಾಂಗ್ರೆಸು ಸಮಿತಿಯು ಕೊಡಗಿನ ಸಂಯೋಜನ ಪಕ್ಷಕ್ಕೆ ಸಂಪೂರ್ಣ ಬೆಂಬಲವನ್ನೀಯುತ್ತಿದೆ. ಕೊಡಗಿನ ದೊಡ್ಡ ಬಹುಮತ ಜನರು ಕೊಡಗು ಪ್ರತ್ಯೇಕವಿರಬೇಕೋ ಯಾ ಸಂಯೋಜನೆಯಾಗಬೇಕೋ ಎಂಬ ಪ್ರಶ್ನೆಯನ್ನು ತಮ್ಮ ಪ್ರಾಣದಷ್ಟೇ ಪ್ರಾಮುಖ್ಯವಾಗಿ ಎಣಿಸುತ್ತಿರುವುದರಿಂದ ಬರುವ ಚುನಾವಣೆಯಲ್ಲಿ ತಮ್ಮ ಓಟುಗಳನ್ನು ಮುಖ್ಯವಾಗಿ ಈ ಪ್ರಶ್ನೆಯ ಮೇಲೆಯೇಕೊಡುವರು. ಆದುದರಿಂದ ಕಾಂಗ್ರೆಸು ಉಮೇದ್ವಾರರು ಚುನಾವಣೆಯಲ್ಲಿ ಗೆದ್ದ ನಂತರ ಕಾಂಗ್ರೆಸು ಪಾರ್ಟಿಯ ಕೌನ್ಸಿಲು ಮೆಂಬರುಗಳಾಗಿರುವೆವೆಂದು ಕಾಂಗ್ರೆಸು ಪ್ರತಿಜ್ಞೆಗೆ ಸಹಿಮಾಡಿದಲ್ಲು ಎರಡು ಪಂಗಡದವರನ್ನು ತಮ್ಮ ತಮ್ಮ ಸಂಯೋಜನೆ ಯಾ ಪ್ರತ್ಯೇಕ ಪ್ರಶ್ನೆಗಳ ಮೇಲೆ ಚುನಾವಣೆಗೆ ನಿಲ್ಲಲು ಬಿಟ್ಟು ಕೊಡಗಿನ ಜನರಿಗೆ ತಮ್ಮ ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡಲು ಅವಕಾಶ ಮಾಡಿಕೊಡುವದು ನ್ಯಾಯವಾಗಿದೆ. ಕೊಡಗಿನಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಉಮೇದ್ವಾರರುಗಳನ್ನು ನಿಲ್ಲಿಸದೆ, ಪ್ರಾಂತ್ಯದ ಭವಿಷ್ಯತ್ತಿನ ಅಭಿಪ್ರಾಯವನ್ನೊಳಗೊಂಡು ತಮ್ಮ ತಮ್ಮ ಯೋಗ್ಯತೆ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಲ್ಲಿಯ ಕಾಂಗ್ರೆಸು ಕೆಲಸಗಾರರನ್ನು ಬಿಡಬೇಕು. ಈಗ ಚುನಾವಣೆಯಲ್ಲಿ ಸ್ಪರ್ಧಿಸುವಂಥಾ ಬೇರೆ ಸುಸಜ್ಜಿತವಾದ ರಾಜಕೀಯ ಪಂಗಡಗಳು ಇಲ್ಲಿ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಪ್ರತ್ಯೇಕವಾದಿ ಕಾಂಗ್ರೆಸಿಗರನ್ನು ಚುನಾವಣೆಗೆ ನಿಲ್ಲಲು ಬಿಡದಿದ್ದರೆ ಪ್ರತ್ಯೇಕತ್ವ ಪ್ರಶ್ನೆ ಮೇಲೆ ಬಲವಾದ ಸ್ವತಂತ್ರ ಉಮೇದ್ವಾರರುಗಳು ನಿಲ್ಲಬಹುದಾದ ಕಾರಣ ಕಾಂಗ್ರೆಸಿಗೆ ಜಯ ದೊರೆಯುವುದು ಕಷ್ಟ. ಈ ರೀತಿಯ ಚುನಾವಣೆ ಕ್ರಮಕ್ಕೆ ನಿಮ್ಮ ಪೂರ್ತಿ ಸಹಾನುಭೂತಿಯಿರುವದರಿಂದ ನಮ್ಮ ಪಾರ್ಟಿಯ ಎಲ್ಲಾ ಉಮೇದ್ವಾರರುಗಳನ್ನು ಚುನಾವಣೆಗೆ ನಿಲ್ಲಲು ಕೇಂದ್ರ ಚುನಾವಣೆ ಸಮಿತಿಯು ಬಿಡುವದೆಂದು ನಂಬಿ ಕ್ಷೇತ್ರಗಳು ನಿಶ್ಚಯವಾದ ಮೇಲೆ ಸ್ಥಳೀಯ ಎಸೆಂಬ್ಲಿಯಲ್ಲಿ ೨ಳ ಸ್ಥಳಗಳಿಗೂ ಮತ್ತು ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಸ್ಥಳಕ್ಕೂ ನಮ್ಮ ಪ್ರತ್ಯೇಕ ಪಕ್ಷದ ಉಮೇದುವಾರರುಗಳ ನೇಮಕ ಪತ್ರಗಳನ್ನು ಅವಶ್ಯವಿರುವ ಫೀಸ್ ಮತ್ತು ಠೇವಣಾತಿಗಳೊಂದಿಗೆ ನೀವು ಹೇಳಿದಂತೆ ಕ. ಪ್ರಾ. ಕಾಂ. ಕಮಿಟಿಯ ಮೂಲಕ ಕಳುಹಿಸುವೆವು.

ಈ ಮಧ್ಯೆ ನಮ್ಮ ಸ್ಥಳೀಯ ಎಸೆಂಬ್ಲಿ ಚುನಾವಣೆಗೆ ಕ್ಷೇತ್ರಗಳು ಇನ್ನೂ ನಿಶ್ಚಯವಾಗದೆ ಇರುವುದರಿಂದ, ನಿಶ್ಚಯ ಆಗುವ ವರೆಗೆ ನಮ್ಮ ನೇಮಕ ಪತ್ರಗಳನ್ನು ಕಳುಹಿಸಲು ಸಮಯ ಮುಂದರಿಸುವಂತೆ ನೀವು ದಯವಿಟ್ಟು ಕ. ಪ್ರಾ. ಕಾಂ. ಕಮಿಟಿಗೆ ಬರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಕ. ಪ್ರಾ. ಕಾಂ. ಕಮಿಟಿಯು ಎಸೆಂಬ್ಲಿ ಮೆಂಬರುತನಕ್ಕೆ ನಿಶ್ಚಯಿಸಿರುವ ನೂರು ರೂ ಫೀಸು ಮತ್ತು ಇನ್ನೂರು ರೂ. ಠೇವಣಾತಿಯು ಮತ್ತು ಪಾರ್ಲಿಮೆಂಟು ಮೆಂಬರುತನಕ್ಕೆ ಇನ್ನೂರ ರೂಪಾಯಿ ಫೀಸು ಐನೂರು ರೂಪಾಯಿ ಡಿಪಾಜಿಟ್ಟು ಬಹಳಹೆಚ್ಚಾಗಿದೆ. ಮತ್ತು ಹಿಂದುಳಿದ ಪಂಗಡಗಳ ಉಮೇದ್ವಾರರುಗಳಿಗೆ ಏನೂ ದೂರಿಯಾತಿ ತೋರಿಸಿರುವುದಿಲ್ಲ. ಮೆಂಬರೊಂದರ ರೂ. ಇನ್ನೂರು ಠೇವಣಾತಿ ತೆಗೆದುಕೊಳ್ಳುವ ಕರ್ನಾಟಕ ಕಾಂಗ್ರೆಸು ಕಮಿಟಿಯವರ ಚುನಾವಣಾ ಪ್ರಚಾರವು ನಮಗೆ ಬೇಕಾಗಿಲ್ಲ; ಬದಲು ಅವರ ಪ್ರಚಾರವು ಸಂಯೋಜನೆ ಪಕ್ಷದ ಉಮೇದುವಾರರಿಗೆ ಮಾತ್ರ ಒತ್ತಾಸೆಕೊಡುವಂತಾಗುವುದು. ಆದುದರಿಂದ ಸದರಿ ಠೇವಣಾತಿಯಿಂದ ನಮ್ಮನ್ನು ಪೂರ್ತಿ ವಿನಾಯಿಸುವಂತೆ ಅಥವಾ ಅದನ್ನು ಬಹು ಮಟ್ಟಿಗೆ ಕಡಿಮೆ ಮಾಡುವಂತೆ ನೀವು ದಯವಿಟ್ಟು ಕ. ಪ್ರಾ. ಕಾ. ಕಮಿಟಿಗೆ ಬರೆಯಬೇಕಾಗಿ ಕೋರುತ್ತೇನೆ.

ಈ ದಿನ ಸಾಯಂಕಾಲ ನಾನು ಡೆಲ್ಲಿಯಿಂದ ವಾಪಾಸು ಹೊರಡುವೆನು. ಕೇಂದ್ರ ಚುನಾವಣಾ ಸಮಿತಿಯ ಮುಂದಿನ ವಿಂಟಿಂಗು ಯಾವಾಗ ನಡೆಯುವದೆಂದು ನನಗೆ ಗೊತ್ತಾದರೆ ಕೊಡಗಿನ ಸಂಬಂಧ ನಿಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಕೊಡಲು ನಾನು ಸದರಿ ವಿಂಟಿಂಗಿಗೆ ಅವಶ್ಯವಿದ್ದಲ್ಲು ಡೆಲ್ಲಿಗೆ ಬರುವೆನು.

ತುಂಬಾ ವಂದನೆಗಳಿಂದ

ತಾ. ೧೪-೯-೫೧. ನಿಮ್ಮವನಾದ,
ಪಿ. ಐ. ಬೆಳ್ಯಪ್ಪ.

ಮೂರನೆಯ ಪತ್ರ.

"ಗಾಂಧಿ ಭವನ"
ಮಡಿಕೇರಿ, ೧೯-೧೦-೫೧.

ಪ್ರೀಯ ಪಂಡಿತಜಿಯವರೇ—

ನಾನು ನಿಮ್ಮನ್ನು ತಾ. ೧೩-೯-೫೧ ರಲ್ಲಿ ಡೆಲ್ಲಿಯಲ್ಲಿ ಭೇಟಿಯೂಗಿ ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸು ಕೆಲಸಗಾರರ ಸ್ಥಿತಿಯನ್ನು ಕುರಿತು ನಿಮ್ಕೊಂದಿಗೆ ಸಂಭಾಷಣೆ ನಡೆಸಿದಾಗ್ಗೆ, ಕ. ಪ್ರಾ. ಕಾ. ಕಮಿಟಿಯು ನಮ್ಮ ಪಕ್ಷಕ್ಕೆ ಸಂಪೂರ್ಣ ವಿರುದ್ಧವಿದ್ದುದರಿಂದ ನಮ್ಮ ಕಷ್ಟದ ಪರಿಸ್ಥಿತಿಯನ್ನು ನೀವು ಅರಿತುಕೊಂಡು, ಕೊಡಗಿನಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಉಮೇದುವಾರರನ್ನು ಹಾಕದೆ, ಕಾಂಗ್ರೆಸಿನಲ್ಲಿರುವ ಎರಡು ಪಂಗಡಗಳವರನ್ನು ಅವರವರ ಯೋಗ್ಯತೆ ಮೇರೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡಬೇಕೆಂಬ ನನ್ನ ಸೂಚನೆಗೆ ನೀವು ಪೂರ್ಣ ಸಹಾನುಭೂತಿ ತೋರಿಸಿದಿರಿ. ಇದು ನಮ್ಮ ಪಂಗಡದ ಕೆಲಸಗಾರರಿಗೆ ತುಂಬಾ ಧೈರ್ಯವನ್ನುಂಟು ಮಾಡಿತ್ತು. ನಮ್ಮ ಸಂಭಾಷಣೆಯ ಸಾರಾಂಶವನ್ನು ಕೊಟ್ಟು, ನಮ್ಮ ಸ್ಥಳೀಯ ಎಸೆಂಬ್ಲಿಯ ಚುನಾವಣಾ ಕ್ಷೇತ್ರಗಳು ಇನ್ನೂ ನಿಶ್ಚಯವಾಗದ ಕಾರಣ, ಅದಕ್ಕೆ ಉಮೇದುವಾರರ ನೇಮಕ ಪತ್ರಗಳನ್ನು ಕಳುಹಿಸಲು ಸಮಯ ಮುಂದರಿಸುವಂತೆಯೂ, ಕ. ಪ್ರಾ. ಕಾ. ಕಮಿಟಿಯವರ ಚುನಾವಣಾ ಪ್ರಚಾರವು ನಮಗೆ ಅವಶ್ಯವಿಲ್ಲದ್ದರಿಂದ ನಾವು ಅವರಿಗೆ ಕೊಡಬೇಕಾದ ಠೇವಣಾತಿಯನ್ನು ವಜ ಮಾಡಬೇಕು, ಇಲ್ಲವಾದರೆ ಬಹುಮಟ್ಟಿಗೆ ಕಡಿಮೆ ಮಾಡುವಂತೆಯೂ ಕ. ಪ್ರಾ. ಕಾ ಕಮಿಟಿಗೆ ನೀವು ದಯವಿಟ್ಟು ಬರೆಯಬೇಕೆಂದು ತಾ. ೧೪-೯-೫೧ ನಾನು ನಿಮಗೊಂದು ಪತ್ರ ಬರೆದಿದ್ದೆನು. ಇದಕ್ಕೆ ಕ. ಪ್ರಾ. ಕಾ. ಕ. ಯವರಿಂದಾಗಲೀ ನಿಮ್ಮಿಂದಾಗಲೀ ಜವಾಬು ದೊರೆಯದ್ದರಿಂದ ನಾನು ಲೋಕಸಭೆಗೆ ನಮ್ಮ ಪಕ್ಷದ ಉಮೇದುವಾರರಾದ ಶ್ರೀ ಕೆ. ಟಿ. ಉತ್ತಪ್ಪನವರ ನೇಮಕ ಪತ್ರವನ್ನು ಪೂರ್ತಿ ಫೀಸು ಮತ್ತು ಠೇವಣಾತಿ ರೂ. ೭೫೦/-ರೊಂದಿಗೆ ನನ್ನದೊಂದು ಮೇಲ್ಕಾಗದ ಸಮೇತ ಸೆಪ್ಟೆಂಬರು ೨೭ರಲ್ಲಿ ಕ. ಪ್ರಾ. ಕಾ. ಕ. ಗೆ ಕಳುಹಿಸಬೇಕಾಯಿತು. ಅದೇ ದಿನ ಸದರಿ ನೇಮಕ ಪತ್ರದ ಮತ್ತು ನನ್ನ ಪತ್ರದ ನಕಲೊಂದನ್ನು ನಿಮಗೆ ಸೀದಾ ಕಳುಹಿಸಲಾಯಿತು. ಕ. ಪ್ರಾ. ಕಾ. ಕ. ಯವರು ನಮ್ಮ ಉಮೇದುವಾರರ ನೇಮಕ ಪತ್ರವನ್ನು ಶಿಫಾರಸ್ಸು ಮಾಡದಿರಲು ಈ ತಿಂಗಳ ಪ್ರಾರಂಭದಲ್ಲೇ ತೀರ್ಮಾನಿಸಿದ್ದರೂ ಕೂಡ ಉಮೇದುವಾರರಿಗೆ ಈ ತಾ. ೧೩ರಲ್ಲಿ ಮಾತ್ರ ತಿರಸ್ಕಾರಕ್ಕೆ ಕಾರಣವೇನನ್ನೂ ಸೂಚಿಸದೆ ತಂತೀ ಮೂಲಕ ತಿಳಿಸಿದರು. ಕರ್ನಾಟಕ ಚುನಾವಣಾ ಬೋರ್ಡಿನಲ್ಲಿರುವ ಇಲ್ಲಿಯ ಸಂಯೋಜನಾ ಪಕ್ಷದ ಮೆಂಬರೊಬ್ಬರು ನಮ್ಮ ಉಮೇದುವಾರರ ಡಿಪಾಜಿಟ್ಟು ಹಣವನ್ನು ಮುಟ್ಟುಗೋಳು ಹಾಕಲ್ಪಡುವುದೆಂದು ಹೇಳುತ್ತಿದ್ದಾರೆ. ಆರಿಸಲ್ಪಟ್ಟ ಉಮೇದುವಾರರುಗಳ ಪಟ್ಟಿಯು ಕ. ಪ್ರಾ. ಕಾ. ಕಮಿಟಿಯಿಂದ ಇನ್ನೂ ಬಂದಿಲ್ಲವೆಂದೂ ಆಯ್ಕೆ ಆದ ಮೇಲೆ ನ್ಯಾಯ ಸಿಕ್ಕದ ಉಮೇದುವಾರರು ಆಫೀಲನ್ನು ತಮ್ಮ ಆಫೀಸಿಗೆ ಕಳುಹಿಸಬಹುದೆಂದೂ ಮತ್ತು ಆಖೈರು ಆಯ್ಕೆ ಮಾಡುವಾಗ ನನಗೆ ತಿಳಿಸುವರೆಂದೂ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿನಿಂದ ತಾರೀಕು ೭-೧೦-೫೧ರಲ್ಲಿ ನನಗೊಂದು ಕಾರ್ಡು ಬಂದಿದೆ.

ಸ್ಥಳೀಯ ಎಸೆಂಬ್ಲಿ ಚುನಾವಣೆಗೆ ಉಮೇದುವಾರರುಗಳ ನೇಮಕ ಪತ್ರಗಳನ್ನು ಕಳುಹಿಸಲು ನಮ್ಮ ಮುಂದೆ ಹೆಚ್ಚಿನ ಸಮಯವಿಲ್ಲ. ೨ಳ ಉಮೇದುವಾರರುಗಳ ನೇಮಕ ಪತ್ರಗಳನ್ನು ಒಟ್ಟು ಡಿಪಾಜಿಟ್ಟು ೭,೨೦೦ ರೂಪಾಯಿಗಳೊಂದಿಗೆ ಕ. ಪ್ರಾ. ಕಾ. ಕಮಿಟಿಯ ಮೂಲಕ ಕಳುಹಿಸಿದರೆ ಈ ದೊಡ್ಡ ಮೊಬಲಗನ್ನು ಕೂಡ ಅವರು ಮುಟ್ಟುಗೋಳು ಹಾಕುವರೆಂಬ ಭಯ ನಮಗಿದೆ. ನೀವು ಒಪ್ಪಿದರೆ ಡಿಪಾಜಿಟ್ಟು ಹಣವನ್ನು ಅ. ಭಾ. ಕಾ. ಕಮಿಟಿಗೆ ಕಳುಸಲು ತಯಾರಿದ್ದೇವೆ. ನೇಮಕ ಪತ್ರಗಳನ್ನು ಕ. ಪ್ರಾ. ಕಾ. ಕಮಿಟಿಯ ಮೂಲಕ ಕಳುಹಿಸುವ ಮುಂಚಿತವಾಗಿ ನಮ್ಮ ಪಕ್ಷದ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡುವಿರೋ ಎಂಬುದನ್ನು ತಿಳಿಸಿದರೆ ನಮಗೆ ತುಂಬಾ ಸಹಾಯವಾಗುತಿತ್ತು. ತೊಂದರೆಯನ್ನು ದಯವಿಟ್ಟು ಕ್ಷಮಿಸಿ. ಒಂದು ಪಂಕ್ತಿ ಜವಾಬಿಗೆ ಋಣಿಯೂಗುವೆನು.

ನಿಮ್ಮವನಾದ,
ಪಿ. ಐ. ಬೆಳ್ಯಪ್ಪ.

ಅಕ್ಟೋಬರು ಅಂತ್ಯದಲ್ಲಿ ಶ್ರೀ ಪಿ. ಐ. ಬೆಳ್ಯಪ್ಪನವರು ಡೆಲ್ಲಿಗೆ ಹೋಗಿ ತಾ. ೨೯ರಲ್ಲಿ ಪಂಡಿತಜೀಯವರನ್ನು ಭೇಟಿ ಮಾಡಿ ಅವರಿಗೆ ಕೊಟ್ಟ ಅಪ್ಪೀಲು.—

ಪಂಡಿತ ಜವಾಹರ್‌ಲಾಲ್ ನೆಹರುರವರಿಗೆ—
ಅಧ್ಯಕ್ಷರು, ಇಂಡಿಯನ್ ನೇಶನಲ್ ಕಾಂಗ್ರೆಸ್, ನ್ಯೂಡೆಲ್ಲಿ.

ಮಾನ್ಯ ಮಹಾಶಯರೆ,

ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸ್ಸು ಕೆಲಸಗಾರರಾದ ನಾವು ಈ ಕೆಳಗಿನ ವಿಚಾರಗಳನ್ನು ಆಲೋಚನಾಮತ್ತು ತೀರ್ಮಾನದ ಬಗ್ಗೆ ನಿಮ್ಮ ಮುಂದೆ ಇಡುವವರಿದ್ದೇವೆ.

ಕೊಡಗಿನಲ್ಲಿರುವ ಕಾಂಗ್ರೆಸ್ ಕೆಲಸಗಾರರ ಎರಡು ಪಂಗಡಗಳಲ್ಲಿ, ಒಂದು ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದೂ, ಇನ್ನೊಂದು ಅದನ್ನು ಮೈಸೂರಿಯೂ ಕರ್ನಾಟಕದೊಂದಿಗೆ ಸಂಯೋಜನೆ ಮಾಡಬೇಕೆಂದೂ ಪ್ರಯತ್ನಿಸುತ್ತಿರುವದು ನಿಮಗೆ ತಿಳಿಯದಲ್ಲ. ನಮ್ಮ ಜಿಲ್ಲಾ ಕಾಂಗ್ರೆಸು ಕಮಿಟಿಯು ಕ. ಪ್ರಾ. ಕಾ. ಸಮಿತಿಯ ಅಧೀನದಲ್ಲಿರುವದಾಗಿದೆ. ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಚುನಾವಣೆಯು ಕ್ರಮಬದ್ಧವಾಗಿ ನಡೆಯದ್ದರಿಂದ ನಾವು ಅದರೊಂದಿಗೆ ಅಸಹಕಾರ ಮಾಡಿದ ಕಾರಣ ಅದರಲ್ಲಿ ಈಗ ಸಂಯೋಜನಾವಾದಿಗಳು ಮಾತ್ರ ಇರುವರು. ಕೊಡಗಿನ ಸಂಯೋಜನೆಯಲ್ಲಿ ಪೂರ್ಣ ನಂಬಿಕೆಯಿರುವ ಕ. ಪ್ರಾ. ಕಾ. ಕಮಿಟಿಯವರು ಇಲ್ಲಿಯ ಸಂಯೋಜನ ಪಕ್ಷದವರಿಗೆ ತುಂಬಾ ಬೆಂಬಲ ಕೊಡುತ್ತಿರುವರು.

ಆದಕಾರಣ ಕ. ಪ್ರಾ. ಕಾ. ಕಮಿಟಿಯವರಿಂದ ನ್ಯಾಯ ಸಿಕ್ಕುವದೆಂದು ನಾವು ನಿರೀಕ್ಷಿಸಲಾರೆವು. ಆ ಚುನಾವಣೆಯ ಸಂಬಂಧ ತಾ. ೧೯-೨-೫೧ರಲ್ಲಿ ನಾವು ಕೇಂದ್ರ ಚುನಾವಣಾ ಟ್ರಿಬ್ಯೂನಲ್‌ಗೆ ಕಳುಹಿಸಿದ ಅಪೀಲು ಇನ್ನೂ ವಿಚಾರವಾಗಿಲ್ಲ. ಜನರಲ್ ಚುನಾವಣೆಯು ಸಮೀಪಿಸುತ್ತಿರುವದರಿಂದ ಶ್ರೀ ಪಿ. ಐ. ಬೆಳ್ಯಪ್ಪನವರು ನಮ್ಮ ಪಕ್ಷದ ಪರ ನಿಮ್ಮನ್ನು ಸೆಪ್ಟೆಂಬರ್ ೧೩ರಲ್ಲಿ ಡೆಲ್ಲಿಯಲ್ಲಿ ಭೇಟಿ ಮಾಡಿ ಚುನಾವಣೆಯಲ್ಲಿ ನಮ್ಮ ಸ್ಥಿತಿ ಹೇಗಿರಬೇಕೆಂಬುದನ್ನು ಕುರಿತು ನಿಮಗೆ ವಿವರಿಸಿರುವರು.

ನೀವು ನಮ್ಮ ಕಷ್ಟವನ್ನು ಅರಿತುಕೊಂಡು ಕೊಡಗಿನಲ್ಲಿ ಬರುವ ಚುನಾವಣೆಗೆ ಕಾಂಗ್ರೆಸಿನ ಹೆಸರಿನಲ್ಲಿ ಉಮೇದ್ವಾರರುಗಳನ್ನು ನಿಲ್ಲಿಸದೆ, ಚುನಾವಣೆಯಲ್ಲಿ ಗೆದ್ದ ಮೇಲೆ ತಾವು ಎಸೆಂಬ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸು ಪಾರ್ಟಿ ಮೆಂಬರುಗಳಾಗಿ ಇರುವೆವೆಂದು ಕಾಂಗ್ರೆಸು ಪ್ರತಿಜ್ಞೆಗೆ ಸಹಿ ಮಾಡಿ ಕಾಂಗ್ರೆಸ್ಸಿನ ಎರಡು ಪಕ್ಷದ ಕೆಲಸಗಾರರನ್ನು ತಮ್ಮ ತಮ್ಮ ಯೋಗ್ಯತೆ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡುವ ಸೂಚನೆಗೆ ನೀವು ಸಹಾನುಭೂತಿಯನ್ನು ತೋರಿಸಿದ್ದು ನಮ್ಮ ಪಕ್ಷದ ಕೆಲಸಗಾರರಿಗೆ ತುಂಬಾ ಧೈರ್ಯವನ್ನು ಕೊಟ್ಟ ಕಾರಣ ನಮ್ಮ ನೇಮಕ ಪತ್ರಗಳನ್ನು ನಿಮ್ಮ ಸೂಚನೆಯಂತೆ ಕ. ಪ್ರಾ. ಕಾ. ಕ. ಯ ಮೂಲಕ ಕಳುಹಿಸಲು ನಿಶ್ಚೈಸಿದೆವು. ಹಾಗೆಯೇ ಲೋಕಸಭೆಗೆ ನಮ್ಮ ಪಕ್ಷದ ಶ್ರೀ ಕೆ. ಟಿ. ಉತ್ತಪ್ಪನವರ ನೇಮಕಪತ್ರವನ್ನು ತಾ. ೨೭-೯-೫೧ರಲ್ಲಿ ರೂ. ೭೫೦/- ಠೇವಣಾತಿಯೊಂದಿಗೆ, ಮುಂದಿನ ಚುನಾವಣೆಯಲ್ಲಿ ನಮ್ಮ ಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸುವ ಒಂದು ಪತ್ರ ಸಮೇತ ಕಳುಹಿಸಲಾಯಿತು. ಕ. ಪ್ರಾ. ಕಾ. ಕಮಿಟಿಯವರಿಂದ ನಮಗೆ ನ್ಯಾಯ ದೊರೆಯಲಾರದೆಂಬ ಅನುಭವದ ಮೇರೆ, ಸದರಿ ನೇಮಕ ಪತ್ರದ ಮತ್ತು ಮೇಲ್ಕಾಗದದ ನಕಲನ್ನು ನಿಮಗೆ ಸೀದಾ ಕಳುಹಿಸಿದ್ದೆವು.

ಕ. ಪ್ರಾ. ಕಾ. ಕಮಿಟಿಯವರು ಉಮೇದ್ವಾರರ ನೇಮಕ ಪತ್ರಗಳನ್ನು ಬಿಟ್ಟು ಸಂಯೋಜನ ಪಕ್ಷದ ಉಮೇದ್ವಾರರಾದ ಶ್ರೀ ಎನ್. ಸೋಮಣ್ಣನವರ ನೇಮಕ ಪತ್ರವನ್ನು ಸಿಫಾರಸ್ಸು ಮಾಡಲು ಈ ತಿಂಗಳ ಪ್ರಾರಂಭದಲ್ಲೇ ನಿಶ್ಚೈಸಿದ್ದರೂ ಅದನ್ನು ನಮ್ಮ ಉಮೇದ್ವಾರರಿಗೆ ತಾ. ೧೩ರಲ್ಲಿ ಮಾತ್ರ ತಂತಿ ಮೂಲಕ ಕಳಿಸಿದರು. ಆಲ್ಲದೆ ರೂ. ೭೫೦೫- ಡಿಪಾಜಿಟ್ಟನ್ನು ನಮ್ಮ ಉಮೇದ್ವಾರರಿಗೆ ಪಾಪಾಸು ಕೊಡಲಾಗುವುದಿಲ್ಲವೆಂದು ಇಲ್ಲಿಯ ಸಂಯೋಜನ ಪಕ್ಷದವರು ಅನ್ನುತ್ತಿದ್ದಾರೆ. ಹೇಗೂ ನಮ್ಮ ಉಮೇದುವಾರರು ಸೆಂಟ್ರಲ್ ಪಾರ್ಲಿಮೆಂಟು ಬೋರ್ಡಿಗೆ ಅಫೀಲನ್ನು ಕಳುಹಿಸಿರುವರು.

ಇಲ್ಲಿಯ ಎಸೆಂಬ್ಲಿಯ ಸ್ಥಾನಗಳಿಗೆ ನೇಮಕ ಪತ್ರಗಳನ್ನು ಕಳುಹಿಸಲು ಸಮಯವು ಬಹು ಸಮೀಪಿಸುತ್ತಿದೆ. ನಿಮ್ಮ ಸೂಚನೆಯಂತೆ ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ. ಕಾ. ಕಮಿಟಿಯವರ ಮೂಲಕ ಕಳುಹಿಸಲು ನಾವು ತಯಾರಿದ್ದರೂ ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ನಿಲ್ಲಲು ಬಿಡದಿದ್ದರೆ ಈ ಉಮೇದ್ವಾರರುಗಳಿಗಾಗಿ ಕಳುಹಿಸಬೇಕಾದ ರೂ. ೭೫೦೦ ಠೇವಣಾತಿ ಮುಟ್ಟುಗೋಲು ಹಾಕಲ್ಪಡುವ ಭಯ ನಮಗಿದೆ.

ಆದ್ದರಿಂದ ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ. ಕಾ. ಕಮಿಟಿಯವರ ಮೂಲಕ ಕಳುಹಿಸುವ ಮುಂಚಿತವಾಗಿ ನಮ್ಮ ಈ ಉಮೇದ್ವಾರರುಗಳನ್ನು ಸ್ಥಳೀಯ ಎಸೆಂಬ್ಲಿಗೂ, ಒಬ್ಬರನ್ನು ಪಾರ್ಲಿಮೆಂಟಿಗೂ, ನಿಲ್ಲಲು ಬಿಡಬೇಕೆಂದು ಕೇಳಿಕೊಳ್ಳುತ್ತೇವೆ. ಇದು ಕೂಡಲೆ ಸಾಧ್ಯವಿಲ್ಲವಾದರೆ ನಮ್ಮ ನೇಮಕ ಪತ್ರಗಳನ್ನು ಮಾತ್ರ ಕ. ಪ್ರಾ. ಕಾ. ಕಮಿಟಿಯವರ ಮೂಲಕ ಕಳುಹಿಸಿ ಡಿಪಾಜಿಟ್ಟು ಹಣವನ್ನು ನೀವು ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ನಿಲ್ಲಲು ಬಿಡುವ ತೀರ್ಮಾನ ಮಾಡಿದ ನಂತರ ಕಳುಹಿಸುವಂತೆ ಬಿಡಬೇಕೆಂದೂ, ಇಲ್ಲವಾದರೆ ಸದರಿ ಹಣವನ್ನು ಸೀದಾ ಅಖಿಲ ಭಾರತ ಕಾಂಗ್ರೆಸು ಕಮಿಟಿಗೆ ಕಳುಹಿಸಲು ಬೇಡಬೇಕೆಂದೂ ಕೇಳಿಕೊಳ್ಳುತ್ತೇವೆ. ಕೊಡಗು ಪ್ರತ್ಯೇಕ ನಿಲ್ಲಬೇಕೋ ಯಾ ಸಂಯೋಜನೆಯೊಗಬೇಕೋ ಎಂಬ ಅತೀ ಪ್ರಾಮುಖ್ಯ ಪ್ರಶ್ನೆಯನ್ನು ಓಟರುಗಳಿಗೆ ತಮ್ಮ ಅಭಿಪ್ರಾಯವನ್ನು ಸೂಚಿಸಲು ಒಂದು ಅವಕಾಶವನ್ನು ಮಾಡಬೇಕೆಂಬ ಉದ್ದಿಶ್ಯದಿಂದಲೇ ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡಬೇಕೆಂದು ನಿಮ್ಮಲ್ಲಿನುವ್ಯ ವಿಶೇಷ ಅಫೀಲಾಗಿದೆ. ಈ ಪ್ರಶ್ನೆಯನ್ನು ಇಲ್ಲಿಯ ಜನರು ತಮ್ಮ ಪ್ರಾಣದಷ್ಟೇ ಪ್ರಾಮುಖ್ಯವೆಂದು ಎಣಿಸುವದರಿಂದ ಬರುವ ಚುನಾವಣೆಯು ಈ ಪ್ರಶ್ನೆಯ ಮೇಲೆಯೇ ನಡೆಯುವದು. ಕಾಂಗ್ರೆಸಿನಲ್ಲಿರುವ ಪ್ರತ್ಯೇಕ ಪಕ್ಷದವರನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡದಿದ್ದರೆ ಸ್ವತಂತ್ರವಾಗಿ ನಿಲ್ಲುವ ಪ್ರತ್ಯೇಕವಾದಿ ಬಲವಾದ ಉಮೇದ್ವಾರರುಗಳ ಮುಂದೆ ಕಾಂಗ್ರೆಸಿಗೆ ಜಯ ದೊರೆಯುವುದು ಕಷ್ಟ.

ನಿಮ್ಮವರಾದ ಳಿ ಕಾಂಗ್ರೆಸು

ತಾ. ೨೯–೧೦–೫೧. ಕೆಲಸಗಾರರು.

ಮೇಲಿನ ಅಪೀಲನ್ನು ಪಂಡಿತಜಿಯವರು ಕೇಂದ್ರ ಇಲೆಕ್ಷನ್ ಸಮಿತಿಯು ಮುಂದೆ ಇಟ್ಟಾಗ್ಗೆ ಕೂಡಗಿನ ಕಾಂಗ್ರೆಸಿನ ಎರಡು ಪಂಗಡದವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡಲಾಗುವುದಿಲ್ಲವೆಂದು. ಸದರಿ ಸಮಿತಿಯು ನಿರ್ಣಯಿಸಿದ್ದನ್ನು ಆ. ಬ. ಕಾ. ಕಮಿಟಿಯು ಸೆಕ್ರೆಟರಿಯವರು ಬೆಳ್ಳಪ್ಪನವರಿಗೆ ಕಾ. ೧೫ಲ್ಲಿ ತಿಳಿಸಿದರು ನಂತರ ಅವರು ಈ ಕೆಳಗಿನ ರಾಜೀನಾಮೆ ಪತ್ರವನ್ನು ಕಾಂಗ್ರೆಸು ಪ್ರೆಸಿಡೆಂಟರಿಗೆ ಸೆಕ್ರೆಟರಿಯವರ ಮೂಲಕ ಕಳುಹಿಸಿದರು.

ಪಂಡಿತ ಜವಾಹರಲಾಲ್ ನೆಹರೂ ರವರಿಗೆ–

ಅಧ್ಯಕ್ಷರ, ಇಂಡಿಯನ್ ನೇಶನಲ್ ಕಾಂಗ್ರೆಸ್.

ಮಾನ್ಯ ಮಹಾಶಯರೇ,

ಕೂಡಗಿನ ಕಾಂಗ್ರೆಸಿನ ಪ್ರತ್ಯೇಕ ಪಕ್ಷದ ಕೆಲಸಗಾರರಾದ ನಾವು ಕಾಂಗ್ರೆಸು ಸದಸ್ಯತನಕ್ಕೆ ನಮ್ಮ ರಾಜೀನಾಮೆಯನ್ನು ಈ ಕೆಳಗಿನ ಕಾರಣಗಳಿಗಾಗಿ ಬಹು ದುಃಖದಿಂದ ನಿಮ್ಮ ಮುಂದೆ ಇಡುವವರಿದ್ದೇವೆ.

ನಮ್ಮಲ್ಲಿ ಹಲವರು ಇಂಡಿಯನ್ ನೇಶನಲ್ ಕಾಂಗ್ರೆಸಿನಲ್ಲಿ ಕಳೆದ ಇಪ್ಪತ್ತರಿಂದ ಹಾಗೂ ವತ್ತು ವರ್ಷದ ವರೆಗೆ ಬಹು ನಿಷ್ಠೆಯಿಂದ ಸೇವೆ ಸಲ್ಲಿಸುತ್ತಾ ಹಲವು ಸಾರಿ ಸತ್ಯಾಗ್ರಹ ಚಳವಳಿದಲ್ಲಿ ಜೈಲಿಗೂ ಕೂಡ ಹೋದವರಾಗಿದ್ದೇವೆ. ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿ ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ನಾವು ಆನಂದ ಭರಿತರಾದೆವು. ಈ ಸಂತೋಷದ ಘಟನೆಯ ನಂತರ ನಮ್ಮ ಮನಸ್ಸು ನಮ್ಮ ಪ್ರಾಂತದ ಭವಿಷ್ಯತ್ತಿನ ಕಡೆಗೆ ತಿರುಗಿತು. ದೌರ್ಭಾಗ್ಯದಿಂದ ಕೊಡಗಿನ ಕಾಂಗ್ರೆಸು ಕೆಲಸಗಾರರಲ್ಲಿ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂಬ ಮತ್ತು ದೊಡ್ಡ ಪ್ರಾಂತ್ಯಕ್ಕೆ ಸಂಯೋಜನೆ ಮಾಡಬೇಕೆಂಬ ಎರಡು ಅಭಿಪ್ರಾಯಗಳು ಬಲವಾದುವು. ಕೊಡಗನ್ನು ಸಂಯೋಜನೆ ಮಾಡಬೇಕೆಂಬ ಖಚಿತ ಅಭಿಪ್ರಾಯವುಳ್ಳ ಕ. ಪ್ರಾ. ಕಾ. ಕಮಿಟಿಯು ಕೊಡಗಿನ ಸಂಯೋಜನಾ ಪಕ್ಷಕ್ಕೆ ಪ್ರಾರಂಭದಿಂದಲೇ ಒತ್ತಾಸೆ ಕೊಡುತ್ತಾ ಪ್ರತ್ಯೇಕ ಪಕ್ಷದ ಕೆಲಸ ಕಾರ್ಯಗಳಿಗೆ ಅಡಚಣೆ ತಂದೊಡ್ಡುತ್ತಾ ಸದ್ರಿ ಪಕ್ಷವನ್ನು ನೂಲೆಗೊತ್ತಲು ಪ್ರಯತ್ನಪಡುತ್ತಾ ಬಂದಿರುವರು.

ಹೊಸ ರಾಜ್ಯಘಟನೆಯ ಪ್ರಕಾರ ಮುಂದಿನ ಹೊಸ ಎಸೆಂಬ್ಲಿಗೆ ಕೊಡಗಿನ ಭವಿಷ್ಯ ನಿರ್ಧರಿಸುವ ವಿಷಯ ಪೂರ್ತಿ ಅಧಿಕಾರವಿರುವದಿಂದ ಈ ವಿಚಾರವನ್ನು ಕುರಿತು ಬರುವ ಚುನಾವಣೆಯಲ್ಲಿ ಜನತೆಯ ಅಭಿಪ್ರಾಯ ತಿಳಿಯುವದು ಉತ್ತಮವೆಂದು ನಾವು ಭಾವಿಸಿ, ಕಾಂಗ್ರೆಸು ಪ್ರತಿಜ್ಞೆಗೆ ಸಹಿ ಮಾಡಿ ಚುನಾವಣೆ ನಂತರ ಎಸೆಂಬ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಪಾರ್ಟಿಮೆಂಬರುಗಳಾಗಿ ಇರುವೆವೆಂದು ಒಪ್ಪಿದರೆ ಕೊಡಗಿನ ಎರಡು ಪಕ್ಷದವರನ್ನು ಬರುವ ಚುನಾವಣೆಯಲ್ಲಿ ತಮ್ಮ ತಮ್ಮ ಯೋಗ್ಯತೆ ಮೇರೆ ಸ್ಪರ್ಧಿಸಲು ಬಿಡಬೇಕೆಂದು ನಿವ್ಮಲ್ಲಿ ಅಪ್ಪೀಲು ಮಾಡಿದ್ದಾಗಿದೆ. ದುರ್ದೈವಿಯಿಂದ ಆ ಅವಕಾಶವು ನಮಗೆ ದೊರೆಯಲಿಲ್ಲ. ಆದರೆ ಹಲವು ವರ್ಷಗಳಿಂದ ನನ್ನ ಜೀವವೇ ಆಗಿದ್ದ ಸಂಸ್ಥೆಗೆ ಬಹು ದುಃಖದಿಂದ ರಾಜೀನಾಮೆಯನ್ನು ಕೊಡಬೇಕಾದರೂ ಕೂಡ ಈ ಚುನಾವಣೆಯನ್ನು ನಮ್ಮ ಪ್ರಾಂತ್ಯದ ಭವಿಷ್ಯತ್ತನ್ನು ನಿಶ್ಚಯಿಸಲು ಉಪಯೋಗಿಸದಿದ್ದರೆ ನಾವು ನಮ್ಮ ದೇಶಕ್ಕೆ ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂದು ನಮಗನಿಸುತ್ತದೆ. ನಾವು ಬೇರೆ ಯಾವ ಪಾರ್ಟಿಗೂ ಸೇರಲು ಇಚ್ಛಿಸುವುದಿಲ್ಲವಾದುದರಿಂದ ಈ ಆಗಲುವಿಕೆಯು ತಾತ್ಕಾಲಿಕವಾಗುವುದು ಮತ್ತು ಚುನಾವಣೆಯಲ್ಲಿ ಜಯ ಹೊಂದಿದ ನಂತರ ಪುನಹ ಕಾಂಗ್ರೆಸಿಗೆ ಏನೊಂದೂ ಸಂಕೋಚವಿಲ್ಲದೆ ಸೇರಲಿರುವೆವು.

ನಿಮ್ಮವರಾದ

ಳಗ ಕಾಂಗ್ರೆಸು ಕೆಲಸಗಾರರು.

ಕಾಂಗ್ರೆಸು ಪ್ರೆಸಿಡೆಂಟರ ಜವಾಬು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ,

ನ್ಯೂಡೆಲ್ಲಿ,

೩–೧೧–೫೧.

ಪ್ರಿಯ ಬೆಳ್ಳಪ್ಪಾ,

ನೀವು ಮತ್ತು ಹಲವರು ಇಂಡಿಯನ್ ನೇಶನಲ್ ಕಾಂಗ್ರೆಸಿನ ಸದಸ್ಯತನಕ್ಕೆ ರಾಜೀನಾಮೆ ಕೊಡುತ್ತೇವೆಂದು ಸಹಿ ಮಾಡಿ ಕಳುಹಿಸಿದ ಪತ್ರವೊಂದು ಈ ದಿನ ನನಗೆ ಸಿಕ್ಕಿದೆ. ಈ ಪತ್ರದಲ್ಲಿ ತಾರೀಕೆಲ್ಲ ನೀವು ಕೆಲವು ದಿವಸಗಳ ಹಿಂದೆ ಡೆಲ್ಲಿಗೆ ಬಂದಾಗ್ಗೆ ಈ ಪತ್ರವನ್ನು ತಂದಿರಬಹುದಾಗಿ ನನ್ನ ಊಹನೆ ಅಂದರೆ, ನೀವು ಕೆಲವು ಸಮಯದ ಹಿಂದೆ ನನ್ನನ್ನು ಭೇಟಿಮಾಡಿದಾಗ್ಗೆ ಈ ಪತ್ರವು ನಿಮ್ಮಲ್ಲಿತ್ತು. ನೀವು ಡೆಲ್ಲಿಗೆ ಬಂದಾಗ್ಗೆ ನಿಜಕ್ಕೂ ರಾಜೀನಾಮೆಗಳನ್ನ ಜೇಬಿನಲ್ಲಿ ಹಾಕಿಕೊಂಡು ಬಂದಿದ್ದೀರಿ.

ಕೊಡಗಿನ ಸಂಬಂಧ ನಮ್ಮ ಅಭಿಪ್ರಾಯವನ್ನು ನಿಮಗೆ ಹಲವು ಸಾರಿ ಹೇಳಿದ್ದೇನೆ. ಕೊಡಗಿನ ಸಂಯೋಜನೆಯ ಪ್ರಶ್ನೆ ಈಗ ಬರುವುದಿಲ್ಲ ಮತ್ತು ಮುಂಬರುವ ಚುನಾವಣೆಗೂ ಅದಕ್ಕೂ ಸಂಬಂಧವಿಲ್ಲ. ಕೆಲವು ಸಮಯದ ಹಿಂದೆಯೇ ಕೊಡಗನ್ನೊಳಗೊಂಡು ಹಲವು ಸ್ಟೇಟ್‌ಗಳಿಗೆ ಸಂಬಂಧಪಟ್ಟ ಖಾನೂನನ್ನು ಪಾರ್ಲಿಮೆಂಟ್ ಸಭೆಯು ಮಾಡಿದೆ. ಇದರಿಂದ ಸಂಯೋಜನೆಯು ಮತ್ತು ಕೂಡಲೆ ಮಾತ್ರವಲ್ಲ, ಕೆಲವು ಸಮಯದ ವರೆಗೆ ಇಲ್ಲವೆಂದು ಅರ್ಥವಾಗುತ್ತೆ. ಇಲ್ಲವಾದರೆ ಕೊಡಗಿನಲ್ಲಿ ಚುನಾಯಿತ ಎಸೆಂಬ್ಲಿಗೆ ಕೆಲವು ಅಧಿಕಾರಗಳನ್ನು ಕೊಡುವ ಈ ಖಾನೂನು ಮಾಡಿ ಪ್ರಯೋಜನವಿಲ್ಲ.

ಹೀಗಿರುವಾಗ್ಗೆ ಸಂಯೋಜನೆ ಪ್ರಶ್ನೆಯ ಮೇಲೆ ಚುನಾವಣೆಯನ್ನು ನಡಿಸುವುದು ಅಸಂಬದ್ಧ; ಬಹು ಅಕಾಲವಾದುದ್ದು ಮತ್ತು ಅವಿವೇಕದ್ದು. ಯಾವ ವಿಚಾರದ ಮೇಲಾದರೂ ಅಭಿಪ್ರಾಯ ಕೊಡುವ ಹಕ್ಕು ಕೊಡಗಿನ ಹೊಸ ಎಸೆಂಬ್ಲಿಗೆ ಖಂಡಿತಾ ಇರುವದು. ಆದರೆ ಸಂಯೋಜನೆಯ ಪ್ರಶ್ನೆಯನ್ನು ಪರಿಸ್ಥಿತಿಯು ಒತ್ತಾಯದಿಂದ ಮುಂದಕ್ಕೆ ತಳ್ಳಿ ಅದನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡದಿದ್ದರೆ ಇದರ ವಿಚಾರ ಕೊಡುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇರಲಾರದು. ಹೇಗೂ ಈ ವಿಚಾರಪನ್ನು ಕೊಡಗಿನ ಎಸೆಂಬ್ಲಿಯು ತೀರ್ಮಾನಿಸಲಾರದು. ಆದರೆ ಪಾರ್ಲಿಮೆಂಟ್ ಸಭೆಯು ಕೊಡಗಿನ ಜನರ ಅಭಿಪ್ರಾಯವನ್ನು ಮಾತ್ರವಲ್ಲ ಇತರ ಹಲವು ಮುಖ್ಯ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ತೀರ್ಮಾನಿಸುವುದು.

ಹೇಗೂ ನೀವು ನಿಮ್ಮ ಪತ್ರದಲ್ಲಿ ಸೂಚಿಸಿರುವ ರೀತಿಯನ್ನು ಮಾಡಲೇಬೇಕೆನ್ನುವದಾದರೆ ನಮ್ಮ ಅಡ್ಡಿ ಇಲ್ಲ ಈಗ ಕಾಂಗ್ರೆಸು ಸ್ವಾಭಾವಿಕವಾಗಿ ಬೇರೆ ಜನರಿಂದ ತನ್ನ ಉಮೇದುವಾರರುಗಳನ್ನು ಆರಿಸುವುದು. ಆದರೂ ನಾವು ಸಂಯೋಜನೆಯ ವಿಚಾರ ಗಮನಿಸುವುದಿಲ್ಲ.

ನೀವು ಕಾಂಗ್ರೆಸ್ಸಿನ ಮೆಂಬರುತನಕ್ಕೆ ರಾಜೀನಾಮೆಕೊಟ್ಟರುವುದರಿಂದ ಇನ್ನು ಮುಂದಕ್ಕೆ ನಿಮ್ಮೊಡನೆ ಮೆಂಬರ್ರಲ್ಲವೆಂದೂ ವರ್ತಿಸುವೆವು. ಪ್ರಾಥಮಿಕ ಮೆಂಬರುತನದ ರಾಜೀನಾಮೆಯನ್ನು ಸ್ಥಳೀಯ ಕಮಿಟಿಗೆ ಕಳುಹಿಸತಕ್ಕದ್ದು ನಾವು ಇಲ್ಲಿ ಪ್ರಾಥಮಿಕ ಮೆಂಬರುತನದ ದಾಖಲೆ ಇಡುವುದಿಲ್ಲ.

ನಿಮ್ಮವನಾದ

ಜವಾಹರ್‌ಲಾಲ್ ನೆಹರು.

ಕಾಂಗ್ರೆಸು ಪ್ರೆಸಿಡೆಂಟರ ಮೇಲಿನ ಜವಾಬಿನಲ್ಲಿ ರಾಜೀನಾಮೆ ಪತ್ರಕ್ಕೆ ರೀಕು ಹಾಕಿರಲಿಲ್ಲವೆಂದೂ, ಆದರೆ ಮೊದಲೇ ತಂದಿಂಗಿತ್ತೆಂದೂ ಹೇಳಲ್ಪಟ್ಟಿದೆ. ಶ್ರೀ. ಬೆಳ್ಳಪ್ಪನವರು ಡೆಲ್ಲಿಗೆ ಹೋಗುವ ಮುಂಚೆ–ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಉಮೇದ್ವಾರರನ್ನು ಚುನಾವಣೆಗೆ ನಿಲ್ಲಲು ಬಿಡಬೇಕೆಂದು ತಾವು ಕಾಂಗ್ರೆಸು ಅಧ್ಯಕ್ಷರಿಗೆ ಕೊಡುವ ಅಪ್ಪೀಲನ್ನು ಅವರು ತಿರಸ್ಕರಿಸಿದರೆ, ತಾವು ಕಾಂಗ್ರೆಸು ಮೆಂಬರು ತನಕ್ಕೆ ರಾಜೀನಾಮೆ ಕೊಡಬೇಕೆಂದು ಪ್ರತ್ಯೇಕ ಪಕ್ಷದವರು ತೀರ್ಮಾನಿಸಿದ್ದರು. ಆದರೆ ಆ ರಾಜೀನಾಮೆ ಪತ್ರವು ಡೆಲ್ಲಿಗೆ ತಾ. ೩೦–೧೦–೫೧ ರಲ್ಲಿ ಮಾತ್ರ ಟಪ್ಪಾಲಿನ ಮೂಲಕ ತಲಪಿತ್ತು. ಹೇಗೂ ಇದಕ್ಕೆ ರುಜು ಹಾಕಿದ್ದಾದರೂ ಪಂಡಿತಜಿಯವರ ಜವಾಬು ಸಿಕ್ಕುವ ಮುಂಚೆಯೇ ಆಗಿತ್ತು. ಯಾಕೆಂದರೆ ಅವರ ಜವಾಬು ದೊರೆತನಂತರ ಕೊಡಗಿಗೆ ಬಂದು ರಾಜೀನಾಮೆಗೆ ಸಹಿತೆಗೆದು ವಾಪಸು ಹೋಗುವುದು ಸುಲಭದ ವಿಚಾರವಾಗಿತ್ತಿಲ್ಲ. ಆದರೆ ರಾಜೀನಾಮೆ ಕೊಟ್ಟಿದ್ದಾದರೂ ಪ್ಟೀಲಿಗೆ ಜವಾಬು ಸಿಕ್ಕಿದ ಮೇಲೆ. ಆದ ಕಾರಣ ಅದಕ್ಕೆ ನಿಜವಾದ ತಾರೀಕು ಹಾಕಲು ಸಾಧ್ಯವಿತ್ತಿಲ್ಲ. ತಾರೀಕು ಇಲ್ಲದಿದ್ದರೂ ರಾಜೀನಾಮೆ ಕೊಟ್ಟದರಲ್ಲಿ ಸಂಶಯವೇನೂ ಇಲ್ಲವಷ್ಟೆ.

ಯಾವ ವಿಚಾರದ ಮೇಲಾದರೂ ಅಭಿಪ್ರಾಯ ಕೊಡುವ ಹಕ್ಕು ಕೊಡಗಿನ ಹೊಸ ಎಸೆಂಬ್ಲಿಗೆ ಖಂಡಿತಾ ಇರುವದು ಎಂದು ಪಂಡಿತಜಿಯವರು ಸ್ಪಷ್ಟಪಡಿಸಿರುವರು.

(ಟೀನೇ ಪುಟ ನೋಡಿ)

ಕೊಡಗು

ತಾ. ೭-೧೨-೧೯ಶನಿವಾರ ಪ್ರಕಾಶನೇ ಪೌಷ್ಯವಾರ

ಓಟರುಗಳ ಮುಂದಿರುವ ಪ್ರಶ್ನೆ.

ಭಾರತದ ಪಾರ್ಲಿಮೆಂಟ್ ಸಭೆಗೂ ಮತ್ತು ಸ್ಥಳೀಯ ಎಸೆಂಬ್ಲಿಗೂ ಚುನಾವಣೆಯು ಸವಿಹಿಸುತ್ತಾ ಬಂದ ಹಾಗೆ ಓಟರುಗಳ ಮನಸ್ಸನ್ನು ಗಲಿಬಿಲಿಗೊಳಿಸುವಂಥಾ ಹಲವು ತರದ ಪ್ರಚಾರಗಳು ನಡಿಸಲ್ಪಡುತ್ತಿವೆ. ಕೊಡಗಿನ ಸಂಯೋಜನೆಯ ಪ್ರಶ್ನೆಯು ಈ ಸಾರಿಯ ಚುನಾವಣೆಗೆ ಸಂಬಂಧ ಪಟ್ಟದಲ್ಲವೆಂದು ಕಾಂಗ್ರೆಸ್ಸಿನ ಉಮೇದುವಾರರು ಸಾರುತ್ತಿದ್ದಾರೆ. ಚುನಾವಣೆಯಲ್ಲಿ ಹಲವು ಪಾರ್ಟಿ ಹಂಗಡಗಳು ಭಾಗವಹಿಸುವಲ್ಲಿ ಆಯಾಯ ಪಾರ್ಟಿಯವರು ತಮ್ಮ ಮುಂದಿನ ಸರ್ಕಾರದ ಉದ್ದಿಶ್ಯಗಳನ್ನು ಓಟರುಗಳ ಮುಂದಿಡುವುದು ಸ್ವಾಭಾವಿಕ. ಆದುದರಿಂದ ಯಾವದೊಂದು ಪಾರ್ಟಿಗಾದರೂ ಇಂಥಾ ಪ್ರಶ್ನೆಯು ಓಟರುಗಳ ಮುಂದಿಲ್ಲವೆಂದು ಹೇಳುವ ಹಕ್ಕಿಲ್ಲ. ಒಂದು ವೇಳೆ ಯಾವ ಪಾರ್ಟಿಯೂ ಒಂದು ವಿಚಾರವನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡದಿದ್ದರೆ, ಅದು ಓಟರುಗಳ ದೃಷ್ಟಿಯಲ್ಲಿ ಪ್ರಾಮುಖ್ಯವಾದದ್ದಾದರೆ ಅವರೇ ಆ ಪ್ರಶ್ನೆಯನ್ನು ಉಮೇದುವಾರರುಗಳ ಮುಂದಿಟ್ಟು, ಆದರ ಮೇಲೆಯೇ ತಮ್ಮ ಓಟನ್ನು ಕೊಡುವ ಹಕ್ಕು ಅವರಿಗಿದೆ. ನಿಶೇಷವಾದ ಹಕ್ಕನ್ನು ಓಟರುಗಳು ಚಿಯಸಿದಿರಲಿ.

ಈ ತತ್ವವನ್ನು ಅನುಸರಿಸಿ ನಡೆಯುವದಾದರೆ ಕೊಡಗಿನ ಭವಿಷ್ಯತ್ತಿನಂಥ ಮಹಾ ಪ್ರಶ್ನೆಯನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡುವ ಹಕ್ಕು ಯಾವದಾದ ಒಂದು ಪಾರ್ಟಿಗೂ ಇರುವದಲ್ಲದೆ, ಓಟರುಗಳಿಗೂ ಇದೆಯೆಂಬುದರಲ್ಲಿ ಸಂದೇಹವಿಲ್ಲ. ಈ ಹಕ್ಕು ದೂರ ಸರ್ಕಾರಕ್ಕೂ ಇಲ್ಲ. ಈಗ ಸುಮಾರು ೩೦ ವರ್ಷಗಳಿಂದಲೇ ಸಂಯೋಜನೆಯ ಪ್ರಶ್ನೆಯು ದೇಶದವರ ಮನಸ್ಸನ್ನು ಕಳವಳಗೊಳಿಸುತ್ತಾ ಬಂದಿದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವು ಹೊರೆತನಂತರ ಕೊಡಗಿನ ಮುಂದಿನ ಸರ್ಕಾರದ ಪದ್ಧತಿ ಯಾವ ರೀತಿಯದ್ದಾಗಬೇಕೆಂಬ ವಿಚಾರವು ಮುಂದಕ್ಕೆ ಬಂದಾಗ ಭವಿಷ್ಯತ್ತಿನ ಪ್ರಶ್ನೆಯು ವಿಶೇಷ ಪ್ರಾಮುಖ್ಯತೆಯನ್ನು ಹೊಂದಿತು. ಈ ಸಂಬಂಧ ದೇಶದಲ್ಲಿ ಈಗ ಕಾಲ್ಕೆದ್ದು ವರ್ಷಗಳಿಂದ ಬಹು ತೀವ್ರವಾದ ಚಳವಳಿ ನಡೆಯುತ್ತಾ ಬಂದಿದೆ. ಹಲವು ಜೇಶಿಯರು ಇದನ್ನು ತಮ್ಮ ಪ್ರಾಣಪಷ್ಟೆ ಬೆಲೆಯುಳ್ಳದ್ದೆಂದು ನಂಬಿ ಹ್ಯಾರಿ. ಆದುದರಿಂದ ಇದನ್ನು ಖಗೆಹರಿಸಲು ಅವಕಾಶವನ್ನು ಕಾಯುತ್ತಿದ್ದರು. ಅಂಥಾ ಅವಕಾಶವು ಈಗ ಖಾನೊನು ಬದ್ಧವಾಗಿಯೇ ದೊರೆತಿದೆ. ಈಗ ಇದನ್ನು ಕಳಕೊಳ್ಳುವದು ಬುದ್ಧಿವಂತಿಕೆಯೂ ಇಲ್ಲ. ಈ ದೃಷ್ಟಿಯಿಂದ ಮುಂಬರುವ ಚುನಾವಣೆಯು ಬಹು ಪ್ರಾಮುಖ್ಯವಾದುದು. ಈಗ ಓಟರುಗಳು ತಮ್ಮ ಹಿತದೃಷ್ಟಿಯಿಂದ ಜವಾಬ್ದಾರಿ ಸರ್ಕಾರವನ್ನು ನಡೆಸುವುದಕ್ಕಾಗಿ ಯೋಗ್ಯರಾದ ಮಹನೀಯರನ್ನು ಆರಿಸುವುದಕ್ಕಾಗಿ ಯೋಗ್ಯರಾದ ಮಹನೀಯರನ್ನು ಆರಿಸುವುದು ಮಾತ್ರವಲ್ಲ, ಜೀವಾ ಸರ್ಕಾರವನ್ನು ಮುಂದಕ್ಕೂ ಖಾಯಂ ಆಗಿ ನಡೆಸಲು ಸಾಧ್ಯವಾಗುವಂತೆ ತನ್ನ ಪ್ರಾಂತ್ಯವನ್ನು ಪ್ರತ್ಯೇಕವಾಗಿ ಇಟ್ಟು ಉಳ್ಳವ ತೀರ್ಮಾನನ್ನು ಒಂದೇ ಚುನಾವಣೆಯಲ್ಲಿ ನೂಡುವುದು. ಈಗ ಭವಿಷ್ಯತ್ತಿನ ವಿಚಾರವನ್ನು ಓಟರುಗಳ ಮುಂದಿಡುವುದರಿಂದ ದೇಶಕ್ಕೆ ಯಾವ ಹಾನಿಯೂ ತಟ್ಟುವಂತಿಲ್ಲ. ಬದಲು ದೇಶದ ಕಲ್ಯಾಣವನ್ನು ಸಾಧಿಸಿದಂತಾಗುತ್ತದೆ. ದೇಶದ ಭವಿಷ್ಯತ್ತಿನ ಮಹಾ ಪ್ರಶ್ನೆಯನ್ನು ಒಂದಲ್ಲ ಒಂದು ದಿನ ತೀರ್ಮಾನಿಸಬೇಕಾದ ಕಾರಣಕಾದ ಈಗಲೇ ಓಟರುಗಳವಮುಂದಿಟ್ಟು ಉಭಯ ಪಕ್ಷದವರು ಕೂಲಂಕುಶವಾಗಿ ವಿವರಿಸಿ, ಅದರ ಮೇಲೆ ಓಟರುಗಳ ಅಭಿಪ್ರಾಯವನ್ನು ತೆಗೆಯುವುದು ಅತ್ಯವಶ್ಯವಾಗಿದೆ.

ಮತ್ತೆ ಮನೆ.

ವಾಚಕರಲ್ಲಿ

ಹುಬ್ಬರಿ ಹಬ್ಬದ ರಜೆಯ ಕಾರಣ ಬರುವ ವಾರ ಪತ್ರಿಕೆಯು ಪ್ರಕಟವಾಗದೆ ತಾ. ೨೧-೧೨-೫೧ರಲ್ಲು ಪ್ರಕಟವಾಗುವದು

ವ್ಯವಸ್ಥಾಪಕರು.

ಶನಿವಾರಸಂತೆ ಹೋಬಳಿ ಗುಡುಗಳಲೆ ಜಯದೇವ ಭಾಷೆಯ ದನಗಳ ಜಾತ್ರೆ ಮಾಮೂಲಿನಂತೆ ತಾ. ೨೦-೧೨-೫೧ರಿಂದ ತಾ. ೨೪-೧೨-೫೧ರ ವರೆಗೆ ನಡೆಸಲ್ಪಡುತ್ತಿದೆ

ಕೊರ್ಗ್ ಎಕ್ಸ್ ಸರ್ವಿಸ್ ಮೆನ್ಸ್ ಬಸ್ಸು ತಾರೀಕು ೫-೧೨-೫೧ರಿಂದ ಬೆಳಿಗ್ಗೆ ೫-೪೫ಕ್ಕೆ ಮಡಿಕೇರಿಯಿಂದ ಹೊರಟು ೧೨ ಕ್ಕೆ ತಲಚೇರಿಗೆ ತಲಪಿ, ಅಲ್ಲಿ ಮೈಲ್ ಟ್ರೈನಿಗೆ ಕನೆಕ್ಷನ್ ಕೊಡುವಂತೆಯೂ, ಪುನಃ ಮಧ್ಯಾಹ್ನ ಹೊಂಟು ಸಂಜೆಗೆ ಮಡಿಕೇರಿಗೆ ತಲಪುವಂತೆ ಅನುಕೂಲ ವ್ಯವಸ್ಥೆ ಮಾಡಲಾಗಿದೆ.

ಬರುವ ಡಿಸೆಂಬರ್ ತಾರೀಕು ೧೧ ರಲ್ಲು ಇಗ್ಗುತಪ್ಪ ದೇವರ ಕಲಾಡ್ಚಹಬ್ಬ. ತಾರೀಕು ೧೨ನೇ ಬುಧವಾರ ರೋಹಿಣಿ ನಕ್ಷತ್ರದ ಕರ್ಕಾಟಕ ರಾಶಿಯಲ್ಲು ರಾತ್ರಿ ೯ ಗಂಟೆಗೆ ನೆರೆ ಕಟ್ಟುವದು, ೧೦ ಗಂಟೆಗೆ ಕದಿರು ತೆಗೆಯುವದು, ೧೧ ಘಂಟೆಗೆ ಊಟಕ್ಕೆ ಶುಭಮೂಹೂರ್ತ. ಮೂರನೆ ದಿವಸ ತಾ. ೧೩ ರಲ್ಲು ನಾಡುಪೊಳ್ದು ವೃಶ್ಚಿಕ ನಕ್ಷತ್ರ ವಿಷ್ಟಿ ರಾಶಿ ರಾತ್ರಿ ೮ ಗಂಟೆಗೆ ನೆರೆಕಟ್ಟುವದು ೯ ಗಂಟೆಗೆ ಕದಿರು ತೆಗೆಯುವದು ೧೦ ಗಂಟೆಗೆ ಊಟಮಾಡಲು ಶುಭಮೂಹೂರ್ತ.

ತಾರೀಕು ೨೦-೧೧-೫೧ ರಲ್ಲಿ ನಡೆದ ನಾಪೋಕ್ಲು ಪ್ರಾದೇಶಿಕ ಬಾಲಚಮೂರ್ಯಾಲಿಯಲ್ಲು ನಾಪೋಕ್ಲು ಪೌಢಶಾಲೆಯ ಬಾಲಚಮೂ ಕೂಟದವರು ಗರ್ಲ್ಸ್ ಗೈಡ್ಸ್ ಕೂಟದವರು ಮತ್ತು ಮಂಗಳ ಗುಂಪಿನವರು (Cub pack) ವಿರಾಜಪೇಟೆಯಲ್ಲು ನಡೆಯಲಿರುವ ಹೈನಲ್ ರ್ಯಾಲಿಗೆ ಆರಿಸಲ್ಪಟ್ಟಿರುವರು.

ಇದೇ ತಾರೀಕು ೯ನೇ ಆದಿತ್ಯವಾರ ಸಾಯಂಕಾಲ ೬-೩೦ ಗಂಟೆಗೆ ನಡಿಕೇರಿ ವೇದಾಂತ ಮಂದಿರದಲ್ಲು ಗೀತಾ ಜಯಂತಿಯನ್ನು ಆಚರಿಸುವರು. ಶ್ರೀ. ಮೂಸ್ ಸಿ. ಯಂ. ರಾಮರಾಯರು ಗೀತೆಯ ವಿಷಯ ಪ್ರವಚನ ಮಾಡುವರು.

ವೀರಾಜಪೇಟೆ ಹೈಸ್ಕೂಲಿನ ಲೋವರ್ ಸೆಕೆಂಡರಿ ಸೆಕ್ಷನ್‌ನವರು ಶ್ರೀ. ಕೊಕ್ಕಂಡ ಅಣ್ಣಯ್ಯನವರ ಹಾಕಿ ಟ್ರೋಫಿಯಲ್ಲಿ ಕಳೆದ ತಾರೀಕು ೨೬ ರಲ್ಲು ಕಾಕೋಟುಪರಂಬು ಹೈಯರ್ ಎಲಿಮೆಂಟರಿ ಟೀಮನ್ನು ಸೋಲಿಸಿ ಇನಾಮನ್ನು ಗೆದ್ದರು. ಇವರು ಎಡೆಬಿಡದೆ ಮೂರು ವರ್ಷಗಳಿಂದ ಗೆಲ್ಲುತ್ತಾ ಬಂದಿರುವದರಿಂದ ಈ ಟ್ರೋಫಿಯು ಅವರಿಗೆ ಖಾಯಂ ಆಯಿತು.

ಹುಬ್ಬಳ್ಳಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿರುವ ಅಜ್ಜಿಕುಟ್ಟಿರ ಬೆಳ್ಯಪ್ಪನವರು ಕಳೆದ ತಾರೀಕು ೨೪ ರಲ್ಲು ನಡೆದ ಕಾಲೇಜಿನ ವಾರ್ಷಿಕೋತ್ಸವದ ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸಿ ಚೇಂಪಿಯನ್ ಶಿಪ್ ಪದವಿಯನ್ನು ಪಡೆದರೆಂದು ತಿಳಿಯಬರುತ್ತೆ.

ನಾಪೋಕ್ಲು ನಾಡಿಗೆ ಸಮ್ಮಂಧಿಸಿದ ಬಾಲಚಮೂ ದಳಗಳ ಪ್ರಾದೇಶಿಕ ಬಾಲಚಮೂ ರೇಲಿಯು ಕಳೆದ ತಿಂಗಳ ೨೪ ರಲ್ಲಿ ಅಲ್ಲಿನ ಹೈಸ್ಕೂಲಿನ ಕೆ. ಮು ಅಧ್ಯಕ್ಷತೆಯಲ್ಲಿ ವಿಜೃಂಭಣೆಯಲ್ಲಿ ನಡೆಯಿತು.

ಮುಂಬರುವ ಚುನಾವಣೆಯಲ್ಲಿ ಪಾರ್ಲಿಮೆಂಟ್ ಸಭೆಯ ೧ ಸ್ಥಳಕ್ಕೆ ೩ ಉಮೇದುವಾರರೂ, ಸ್ಥಳೀಯ ಎಸೆಂಬ್ಲಿಯಲ್ಲಿದ್ದ ಕೊಡಗಿನ ೧೦ ಸ್ಥಳಗಳಿಗೆ ೪೩ ಉಮೇದುವಾರರೂ, ಹಿಂದುಳಿದವರಿಗೆ ಕಾದಿಟ್ಟಿಳ ಸ್ಥಳಗಳಿಗೆ ೧೦ ಉಮೇದುವಾರರೂ, ಉ ಕೊಡಗಿನ ಲ ಸ್ಥಳಗಳಿಗೆ ೩೭ ಉಮೇದುವಾರರೂ ಕಾದಿಟ್ಟಿ ೨ ಸ್ಥಳಗಳಿಗೆ ೫ ಉಮೇದುವಾರರೂನೇಮಕ ಪತ್ರಗಳನ್ನು ದಾಖಲು ಮಾಡಿರುವರಾಗಿ ತಿಳಿಯಬರುತ್ತೆ.

ತಾ. ೫-೧೧-೫೧ನೇ ದಿನದಲ್ಲು ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯನ್ನು ಕಾಕೂರು ಶಾಲೆಯವರು ಆಚರಿಸಿದರು. ವಿದ್ಯಾರ್ಥಿಗಳಿಗೂ ಮತ್ತು ಪುರಜನರಿಗೂ ಆಟೋಟಗಳ ಏರ್ಪಾಡಿತ್ತು. ಮಧ್ಯಾಹ್ನದ ಮೇಲೆ ಗೆದ್ದವರಿಗೆ ಬಹುಮಾನಗಳನ್ನು ಕೊಡಲಾಯಿತು. ಸದರಿ ಶಾಲಾ ಅಧ್ಯಾಪಕರಾದ ಶ್ರೀ. ಅಜ್ಜಾಮಾಡ ಮಂದಣ್ಣನವರು ಇಟ್ಟ ಚೇಂಪಿಯನ್ ಶಿಪ್ ಬಟ್ಟಲನ್ನು ವಿದ್ಯಾರ್ಥಿ ಶ್ರೀ ಪೊಯಿಲಂಗಡ ಕಾಳಯ್ಯನವರು ಪಡೆದರು. ಶ್ರೀ. ಕೊಳುವಂಡ ಉತ್ತಪ್ಪನವರು ಅಧ್ಯಕ್ಷತೆ ವಹಿಸಿದ್ದರು. ರಾತ್ರಿ ೮ ಗಂಟೆಗೆ 'ಶಿಬಿರಾಗ್ನಿ' ನಡೆಸಲಾಯಿತು.

ತಾ. ೧೦-೧೧-೫೧ ನೇ ದಿನ ಸಮೂಹ ವಿದ್ಯಾಪ್ರಚಾರ' ದಿನಾಚರಣೆಯನ್ನು ಕಾಕೂರು, ಕುಮುಟೂರು, ನಾಲ್ಕೇರಿ ಮತ್ತು ಮಂಚಳ್ಳಿ ತಾಲೆಯವರು ಸೇರಿ ಆಚರಿಸಿದರು. ಜೇರ್ಮಾಡು ದೇವಸ್ಥಾನದಲ್ಲು ಕಾಫಿ ಪ್ಲಾಂಟರು ಶ್ರೀ. ಬೊಳ್ಳೆರ ಚಂಗಪ್ಪನವರ ಅಧ್ಯಕ್ಷತೆಯಲ್ಲು ಸಭೆ ಸೇರಲಾಯಿತು. ಅಧ್ಯಕ್ಷರು ಅಲ್ಲಿ ನೆರೆದವರಿಗೆಲ್ಲಾ ಊಟವನ್ನು ಕೊಟ್ಟರು. ಕೊರ್ಗ್ ಸ್ಟಾರ್ ಶ್ರೀ. ಜೆಕ್ಕೇರ ಅಪ್ಪಯ್ಯನವರ ಸಂಗೀತ ಮಜೋರಿಯ ನಂತರ ಸಭೆಯು ಬರ್ಕಾಸ್ತಾಯಿತು.

ಬತ್ತದ ಕ್ರಯ.

ಜೋಫ್ ಕಮೀಷನರವರು ಗಂಜ್ರ ಸರಕಾರದ ಮಂಜೂರಾತಿಯಿಂದ ಬತ್ತದ ಬೆಲೆಯನ್ನು ಈ ಕೆಳಗಿನ ರೀತಿ ನಿಶ್ಚಯಿಸಿರುವರು.

ಜೀರಿಗೆ ಸಣ್ಣ ೧ ಗಾಡಿಗೆ	ರೂ. ೨೬೨
ಕೂಯಮುತ್ತು ಸಣ್ಣ	ರೂ. ೨೧೧
ಬಿಳಿಯ, ಕೆಂಬತ್ತಿ ಮತ್ತು ಮಳ್ಳ ಗಾಡಿ ೧ ಕ್ಕೆ	ರೂ. ೨೦೨
ಬೊಡ್ಡಿ ಮತ್ತು ಕರ್ತ	ರೂ. ೧೯೪

ಬತ್ತವನ್ನು ಮೂರಾಟದ ಸ್ಥಳದಿಂದ ತುಂಬುವ ಸೆಂಟರಿಗೆ ಇರುವ ಚಾರ್ಜನ್ನು ಏಜೆಂಟರುಗಳು, ಸಬ್ ಏಜಂಟರುಗಳು ಮತ್ತು ಸರಕಾರಕ್ಕೆ ಗವ ಕಮೀಷನ್ನು ಗಾಡಿ ಒಂದರ ಈ ಕೆಳಗಿನ ರೀತಿ ಇದೆ.

ಕಣದಿಂದ ಮೇಡಂಗ್ ಸೆಂಟರಿಗೆ ಸಾಗಿಸುವ ಚಾರ್ಜು ವೈಲಿಗೆ ೧-೧೨-೦
ಯಂತೆ ಮೂರು ವೈಲಿಗೆ ೪-೧೪-೦
ಸಬ್ ಏಜಂಟರ ಕಮೀಷನ್ ೫-೪-೦
ಮುಖ್ಯ ಏಜಂಟರ ಕಮಿಷನ್ ೦-೧೮-೦
ಸರಕಾರಿ ,, ೧-೦-೦
ಜಮ್ಮ ೧೨-೦-೦

ಕೊಡಗಿನಿಂದ ಹೊರಗೆ ಹೋಗುವ ಬತ್ತಕ್ಕೆ ಮಾತ್ರ ಸರಕಾರಿ ಮತ್ತು ಮುಖ್ಯ ಏಜೆಂಟರ ಕಮಿಷನ್ ಮೊತ್ತಲು ಸೂಡತಕ್ಕದ್ದು.

ರೇಷನ್ ಷಾಪುಗಳಲ್ಲಿ ಬಿಳಿಯ, ಕೆಂಬತ್ತಿ ಮತ್ತು ಮಳ್ಳ ಬತ್ತದ ಅಕ್ಕಿಯನ್ನು ರೂ. ಗೆ 2½ ಸೇರಿನಂತೆ ಮಾರತಕ್ಕದ್ದು.

ಈ ನೋಲಿನ ದರವು ಡಿಸೆಂಬರು ತಾ. ೧೫ರಿಂದ ಜಾರಿಗೆ ಬರುವದಿದೆ. ಇದು ಯಾವಾಗಲಾದರೂ ಬದಲಾಯಿಸಲ್ಪಡಬಹುದಾಗಿದೆ. ಆದುದರಿಂದ ಇಡೀ ವರ್ಷಕ್ಕೆ ಶಾಶ್ವತಂ ಆದದ್ದೆಂದು ತಿಳಿಯಬಾರದು.

ಮೇಲಿನ ದರಗಳನ್ನು ಉಲ್ಲಂಘಿಸಿದವನನ್ನು ಖಾನೂನು ಮೇರೆ ಶಿಕ್ಷೆಗೆ ಗುರಿಪಡಿಸಲಾಗುವದು.

ಕೃತಜ್ಞತಾ ವಂದನೆ.

ಈಗ್ಗೆ ಎರಡು ವರ್ಷಗಳಿಂದ ಖಾಯಿಲಸ್ಥರಾಗಿದ್ದ ಶ್ರೀ ಚಿಪ್ಪುಡೀರ ಬೆಳ್ಯಪ್ಪನವರು ತಾ 4-11-51ರಲ್ಲಿ ಶಿವಾಧೀನರಾದ ನಮ್ಮ ತಂದೆಯವರ ವಿಯೋಗ ಕಾಲದಲ್ಲಿ ಮಾಡಿದ ಖರ್ಚು, ಮತ್ತು ಪತ್ರಗಳ ಮೂಲಕವೂ ನಮ್ಮ ಬಂಧು ಮಿತ್ರರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಬರೆದು ತಿಳಿಸಲು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೂ ನಮ್ಮ ಕೃತಜ್ಞತಾ ವಂದನೆಗಳನ್ನು ಅರ್ಪಿಸುತ್ತೇವೆ.

ಚೆಪ್ಪುಡೀರ ಬಿ. ಸುಬ್ಬಯ್ಯ,
ಮತ್ತು ಸಹೋದರರು.

For Sale.

Austin Saloon, A-70, 1950 model, I6 H. P. in perfect condition, mileage 14,000.

Apply:-

MURPHY,
Raigode Estate,
Sidapur.

ಕೊಡಗು

ತಾ. ೭-೧೨-೧೯ಶನಿವಾರ

ಓಟರುಗಳ ಮುಂದಿರುವ ಪ್ರಶ್ನೆ.

ಭಾರತದ ಪಾರ್ಲಿಮೆಂಟ್ ಸಭೆಗೂ ಮತ್ತು ಸ್ಥಳೀಯ ಎಸೆಂಬ್ಲಿಗೂ ಚುನಾವಣೆಯು ಸವಿಾಪಿಸುತ್ತಾ ಬಂದ ಹಾಗೆ ಓಟರುಗಳ ಮನಸ್ಸನ್ನು ಗಲಿಬಿಲಿಗೊಳಿಸುವಂಥಾ ಹಲವು ತರಹದ ಪ್ರಚಾರಗಳು ನಡಿಸಲ್ಪಡುತ್ತಿವೆ. ಕೊಡಗಿನ ಸಂಯೋಜನೆಯ ಪ್ರಶ್ನೆಯು ಈ ಸಾರಿಯ ಚುನಾವಣೆಗೆ ಸಂಬಂಧ ಪಟ್ಟದಲ್ಲವೆಂದು ಕಾಂಗ್ರೆಸ್ಸಿನ ಉಮೇದುವಾರರು ಸಾರುತ್ತಿದ್ದಾರೆ. ಚುನಾವಣೆಯಲ್ಲಿ ಹಲವು ಪಾರ್ಟಿ ಹಂಗಡಗಳು ಭಾಗವಹಿಸುವಲ್ಲಿ ಆಯಾಯ ಪಾರ್ಟಿಯವರು ತಮ್ಮ ಮುಂದಿನ ಸರ್ಕಾರದ ಉದ್ದಿಶ್ಯಗಳನ್ನು ಓಟರುಗಳ ಮುಂದಿಡುವುದು ಸ್ವಾಭಾವಿಕ. ಆದುದರಿಂದ ಯಾವದೊಂದು ಪಾರ್ಟಿಗಾದರೂ ಇಂಥಾ ಪ್ರಶ್ನೆಯು ಓಟರುಗಳ ಮುಂದಿಲ್ಲವೆಂದು ಹೇಳುವ ಹಕ್ಕಿಲ್ಲ. ಒಂದು ವೇಳೆ ಯಾವ ಪಾರ್ಟಿಯೂ ಒಂದು ವಿಚಾರವನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡದಿದ್ದರೆ, ಅದು ಓಟರುಗಳ ದೃಷ್ಟಿಯಲ್ಲಿ ಪ್ರಾಮುಖ್ಯವಾದದ್ದಾದರೆ ಅವರೇ ಆ ಪ್ರಶ್ನೆಯನ್ನು ಉಮೇದುವಾರರುಗಳ ಮುಂದಿಟ್ಟು, ಆದರ ಮೇಲೆಯೇ ತಮ್ಮ ಓಟನ್ನು ಕೊಡುವ ಹಕ್ಕು ಅವರಿಗಿದೆ. ನಿಶೇಷವಾದ ಹಕ್ಕನ್ನು ಓಟರುಗಳು ಪಡೆಯಬೇಕಿದೆ.

ಈ ತತ್ವವನ್ನು ಅನುಸರಿಸಿ ನಡೆಯುವದಾದರೆ ಕೊಡಗಿನ ಭವಿಷ್ಯತ್ತಿನಂಥ ಮಹಾ ಪ್ರಶ್ನೆಯನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡುವ ಹಕ್ಕು ಯಾವದಾದ ಒಂದು ಪಾರ್ಟಿಗೂ ಇರುವದಲ್ಲದೆ, ಓಟರುಗಳಿಗೂ ಇದೆಯೆಂಬುದರಲ್ಲಿ ಸಂದೇಹವಿಲ್ಲ. ಈ ಹಕ್ಕು ದೂರ ಸರ್ಕಾರಕ್ಕೂ ಇಲ್ಲ. ಈಗ ಸುಮಾರು ೩೦ ವರ್ಷಗಳಿಂದಲೇ ಸಂಯೋಜನೆಯ ಪ್ರಶ್ನೆಯು ದೇಶದವರ ಮನಸ್ಸನ್ನು ಕಳವಳಗೊಳಿಸುತ್ತಾ ಬಂದಿದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವು ಪೊರೆತನಂತರ ಕೊಡಗಿನ ಮುಂದಿನ ಸರ್ಕಾರದ ಪದ್ಧತಿ ಯಾವ ರೀತಿಯದ್ದಾಗಬೇಕೆಂಬ ವಿಚಾರವು ಮುಂದಕ್ಕೆ ಬಂದಾಗ ಭವಿಷ್ಯತ್ತಿನ ಪ್ರಶ್ನೆಯು ವಿಶೇಷ ಪ್ರಾಮುಖ್ಯತೆಯನ್ನು ಕೊಂದಿತು. ಈ ಸಂಬಂಧ ದೇಶದಲ್ಲಿ ಈಗ ಕಾಲ್ಕೆೈದೂ ವರ್ಷಗಳಿಂದ ಬಹು ತೀವ್ರವಾದ ಚಳವಳಿಯು ನಡೆಯುತ್ತಾ ಬಂದಿದೆ. ಹಲವು ಜೇಶಿಯರು ಇದನ್ನು ತಮ್ಮ ಪ್ರಾಣಪಷ್ಟೆ ಬೆಲೆಯುಳ್ಳದ್ದೆಂದು ನಂಬಿ ಹ್ಯಾರಿ. ಆದುದರಿಂದ ಇದನ್ನು ಖಗೆಹರಿಸಲು ಅವಕಾಶವನ್ನು ಕಾಯುತ್ತಿದ್ದರು. ಅಂಥಾ ಅವಕಾಶವು ಈಗ ಖಾನೆನೂ ಬದ್ಧವಾಗಿಯೇ ದೊರೆತಿದೆ. ಈಗ ಇದನ್ನು ಕಳಕೊಳ್ಳುವದು ಬುದ್ಧಿವಂತಿಕೆಯೂ ಇಲ್ಲ. ಈ ದೃಷ್ಟಿಯಿಂದ ಮುಂಬರುವ ಚುನಾವಣೆಯು ಬಹು ಪ್ರಾಮುಖ್ಯವಾದುದು. ಈಗ ಓಟರುಗಳು ತಮ್ಮ ಹಿತದೃಷ್ಟಿಯಿಂದ ಜವಾಬ್ದಾರಿ ಸರ್ಕಾರವನ್ನು ನಡೆಸುವುದಕ್ಕಾಗಿ ಯೋಗ್ಯರಾದ ಮಹನೀಯರನ್ನು ಆರಿಸುವುದಕ್ಕಾಗಿ ಯೋಗ್ಯರಾದ ಮಹನೀಯರನ್ನು ಆರಿಸುವುದು ಮಾತ್ರವಲ್ಲ, ಜೊತೆಗೆ ಸರ್ಕಾರವನ್ನು ಮುಂದಕ್ಕೆ ಖಾಯಂ ಆಗಿ ನಡೆಸಲು ಸಾಧ್ಯವಾಗುವಂತೆ ತನ್ನ ಪ್ರಾಂತ್ಯವನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವ ತೀರ್ಮಾನನ್ನು ಒಂದೇ ಚುನಾವಣೆಯಲ್ಲಿ ನೂಡುಬೇಕಾದುದು. ಈಗ ಭವಿಷ್ಯತ್ತಿನ ವಿಚಾರವನ್ನು ಓಟರುಗಳ ಮುಂದಿಡುವುದರಿಂದ ದೇಶಕ್ಕೆ ಯಾವ ಹಾನಿಯೂ ತಟ್ಟುವಂತಿಲ್ಲ. ಬದಲು ದೇಶದ ಕಲ್ಯಾಣವನ್ನು ಸಾಧಿಸಿದಂತಾಗುತ್ತದೆ. ದೇಶದ ಭವಿಷ್ಯತ್ತಿನ ಮಹಾ ಪ್ರಶ್ನೆಯನ್ನು ಒಂದಲ್ಲ ಒಂದು ದಿನ ತೀರ್ಮಾನಿಸಬೇಕಾದ ಕಾರಣಕಾಡ ಈಗಲೇ ಓಟರುಗಳವುಂದಿಟ್ಟು ಉಭಯ ಪಕ್ಷದವರು ಕೂಲಂಕುಶವಾಗಿ ವಿವರಿಸಿ, ಅದರ ಮೇಲೆ ಓಟರುಗಳ ಅಭಿಪ್ರಾಯವನ್ನು ತೆಗೆಯುವುದು ಅತ್ಯವಶ್ಯವಾಗಿದೆ.

ವಿಶೇಷ.

ವಾಚಕರಲ್ಲಿ

ಹುಶ್ತರಿ ಹಬ್ಬದ ರಜೆಯ ಕಾರಣ ಬರುವ ವಾರ ಪತ್ರಿಕೆಯು ಪ್ರಕಟವಾಗದೆ ತಾ. ೨೧-೧೨-೫೧ರಲ್ಲು ಪ್ರಕಟವಾಗುವದು

ವ್ಯವಸ್ಥಾಪಕರು.

ಶನಿವಾರಸಂತೆ ಹೋಬಳಿ ಗುಡುಗಳಲೆ ಜಯದೇವ ಭಾಷೆಯ ದನಗಳ ಜಾತ್ರೆ ಮಾಮೂಲಿನಂತೆ ತಾ. ೨೧-೧೨-೫೧ ರಿಂದ ತಾ. ೨೪-೧೨-೫೧ರ ವರೆಗೆ ನಡೆಸಲ್ಪಡುತ್ತಿದೆ

ಕೊರ್ಗ್ ಎಕ್ಸ್ ಸರ್ವಿಸ್ ಮೆನ್ಸ್ ಬಸ್ಸು ತಾರೀಕು ೫-೧೨-೫೧ ರಿಂದ ಬೆಳಿಗ್ಗೆ ೫-೪೫ಕ್ಕೆ ಮಡಿಕೇರಿಯಿಂದ ಹೊರಟು ೧೨ ಕ್ಕೆ ತಲಚೇರಿಗೆ ತಲಪಿ, ಅಲ್ಲಿ ಮೈಲ್ ಟ್ರೈನಿಗೆ ಕನೆಕ್ಷನ್ ಕೊಡುವಂತೆಯೂ, ಪುನಃ ಮಧ್ಯಾಹ್ನ ಹೊಂಟು ಸಂಜೆಗೆ ಮಡಿಕೇರಿಗೆ ತಲಪುವಂತೆ ಅನುಕೂಲ ವ್ಯವಸ್ಥೆ ಮಾಡಲಾಗಿದೆ.

ಬರುವ ಡಿಸೆಂಬರ್ ತಾರೀಕು ೧೧ ರಲ್ಲು ಇಗ್ಗುತಪ್ಪ ದೇವರ ಕಲಾಡ್ಡಹಬ್ಬ. ತಾರೀಕು ೧೨ನೇ ಬುಧವಾರ ರೋಹಿಣಿ ನಕ್ಷತ್ರದ ಕರ್ಕಾಟಕ ರಾಶಿಯಲ್ಲು ರಾತ್ರಿ ೯ ಗಂಟೆಗೆ ನೆರೆ ಕಟ್ಟುವದು, ೧೦ ಗಂಟೆಗೆ ಕದಿರು ತೆಗೆಯುವದು, ೧೧ ಘಂಟೆಗೆ ಊಟಕ್ಕೆ ಶುಭಮೂಹೂರ್ತ. ಮೂರನೆ ದಿವಸ ತಾ. ೧೩ ರಲ್ಲು ನಾಡುಪೊಳ್ದು ವ್ಯಾಗಶಿರ ನಕ್ಷತ್ರ ವಿಧಿಪ ರಾಶಿ ರಾತ್ರಿ ೮ ಘಂಟೆಗೆ ನೆರೆಕಟ್ಟುವದು ೯ ಗಂಟೆಗೆ ಕದಿರು ತೆಗೆಯುವದು ೧೦ ಗಂಟೆಗೆ ಊಟಮಾಡಲು ಶುಭಮೂಹೂರ್ತ.

ತಾರೀಕು ೨೦-೧೧-೫೧ ರಲ್ಲಿ ನಡೆದ ನಾಪೋಕ್ಲು ಪ್ರಾದೇಶಿಕ ಬಾಲಚಮೂರ್ಯಾಲಿಯಲ್ಲು ನಾಪೋಕ್ಲು ಪ್ರೌಢಶಾಲೆಯ ಬಾಲಚಮೂ ಕೂಟದವರು ಗರ್ಲ್ಸ್ ಗೈಡ್ಸ್ ಕೂಟದವರು ಮತ್ತು ಮಂಗಳ ಗುಂಪಿನವರು (Cub pack) ವಿರಾಜಪೇಟೆಯಲ್ಲು ನಡೆಯಲಿರುವ ಹೈನಲ್ ರ್ಯಾಲಿಗೆ ಆರಿಸಲ್ಪಟ್ಟಿರುವರು.

ಇದೇ ತಾರೀಕು ೯ನೇ ಆದಿತ್ಯವಾರ ಸಾಯಂಕಾಲ ೬-೩೦ ಗಂಟೆಗೆ ನಡಿಕೇರಿ ವೇದಾಂತ ಮಂದಿರದಲ್ಲು ಗೀತಾ ಜಯಂತಿಯನ್ನು ಆಚರಿಸುವರು. ಶ್ರೀ. ಮೂಸ್ ಸಿ. ಯಂ. ರಾಮರಾಯರು ಗೀತೆಯ ವಿಷಯ ಪ್ರವಚನ ಮಾಡುವರು.

ವಿರಾಜಪೇಟೆ ಹೈಸ್ಕೂಲಿನ ಲೋವರ್ ಸೆಕೆಂಡರಿ ಸೆಕ್ಷನ್‌ನವರು ಶ್ರೀ. ಕೊಕ್ಕಂಡ ಅಣ್ಣಯ್ಯನವರ ಹಾಕಿ ಟ್ರೋಪಿಯಲ್ಲಿ ಕಳೆದ ತಾರೀಕು ೨೬ ರಲ್ಲು ಕಾಕೋಟುಪರಂಬು ಹೈಯರ್ ಎಲಿಮೆಂಟರಿ ಟೀಮನ್ನು ಸೋಲಿಸಿ ಇನಾಮನ್ನು ಗೆದ್ದರು. ಇವರು ಎಡೆಬಿಡದೆ ಮೂರು ವರ್ಷಗಳಿಂದ ಗೆಲ್ಲುತ್ತಾ ಬಂದಿರುವದರಿಂದ ಈ ಟ್ರೋಪಿಯು ಅವರಿಗೆ ಖಾಯಂ ಆಯಿತು.

ಹುಬ್ಬಳ್ಳಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿರುವ ಅಜ್ಜಿಕುಟ್ಟಿರ ಬೆಳ್ಯಪ್ಪನವರು ಕಳೆದ ತಾರೀಕು ೨೪ ರಲ್ಲು ನಡೆದ ಕಾಲೇಜಿನ ವಾರ್ಷಿಕೋತ್ಸವದ ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸಿ ಚೇಂಪಿಯನ್ ಶಿಪ್ ಪದವಿಯನ್ನು ಪಡೆದರೆಂದು ತಿಳಿಯಬರುತ್ತೆ.

ನಾಪೋಕ್ಲು ನಾಡಿಗೆ ಸಮ್ಮಂಧಿಸಿದ ಬಾಲಚಮೂ ದಳಗಳ ಪ್ರಾದೇಶಿಕ ಬಾಲಚಮೂ ರೇಲಿಯು ಕಳೆದ ತಿಂಗಳ ೨೪ ರಲ್ಲಿ ಅಲ್ಲಿನ ಹೈಸ್ಕೂಲಿನ ಕೆ. ಮು ಅಧ್ಯಕ್ಷತೆಯಲ್ಲಿ ವಿಜೃಂಭಣೆಯಲ್ಲಿ ನಡೆಯಿತು.

ಮುಂಬರುವ ಚುನಾವಣೆಯಲ್ಲಿ ಪಾರ್ಲಿಮೆಂಟ್ ಸಭೆಯ ೧ ಸ್ಥಳಕ್ಕೆ ೩ ಉಮೇದುವಾರರೂ, ಸ್ಥಳೀಯ ಎಸೆಂಬ್ಲಿಯಲ್ಲಿದ್ದ ಕೊಡಗಿನ ೧೦ ಸ್ಥಳಗಳಿಗೆ ೪೩ ಉಮೇದುವಾರರೂ, ಹಿಂದುಳಿದವರಿಗೆ ಕಾದಿಟ್ಟಿಲ ಸ್ಥಳಗಳಿಗೆ ೧೦ ಉಮೇದುವಾರರೂ, ಉ ಕೊಡಗಿನ ಲ ಸ್ಥಳಗಳಿಗೆ ೩೭ ಉಮೇದುವಾರರೂ ಕಾದಿಟ್ಟಿ ೨ ಸ್ಥಳಗಳಿಗೆ ೫ ಉಮೇದುವಾರರೂನೇಮಕ ಪತ್ರಗಳನ್ನು ದಾಖಲು ಮಾಡಿರುವರಾಗಿ ತಿಳಿಯಬರುತ್ತೆ.

ತಾ. ೫-೧೨-೫೧ನೇ ದಿನದಲ್ಲು ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯನ್ನು ಕಾಕೂರು ಶಾಲೆಯವರು ಆಚರಿಸಿದರು. ವಿದ್ಯಾರ್ಥಿಗಳಿಗೂ ಮತ್ತು ಪುರಜನರಿಗೂ ಆಟೋಟಗಳ ಏರ್ಪಾಡಿತ್ತು. ಮಧ್ಯಾಹ್ನದ ಮೇಲೆ ಗೆದ್ದವರಿಗೆ ಬಹುಮಾನಗಳನ್ನು ಕೊಡಲಾಯಿತು. ಸದರಿ ಶಾಲಾ ಅಧ್ಯಾಪಕರಾದ ಶ್ರೀ. ಅಜ್ಜಾಮಾಡ ಮಂದಣ್ಣನವರು ಇಟ್ಟ ಚೇಂಪಿಯನ್ ಶಿಪ್ ಬಟ್ಟನ್ನು ವಿದ್ಯಾರ್ಥಿ ಶ್ರೀ ಪೊಯಿಲಂಗಡ ಕಾಳಯ್ಯನವರು ಪಡೆದರು. ಶ್ರೀ. ಕೊಳುವಂಡ ಉತ್ತಪ್ಪನವರು ಅಧ್ಯಕ್ಷತೆ ವಹಿಸಿದ್ದರು. ರಾತ್ರಿ ೮ ಗಂಟೆಗೆ 'ಶಿಬಿರಾಗ್ನಿ' ನಡೆಸಲಾಯಿತು.

ತಾ. ೧೦-೧೧-೫೧ ನೇ ದಿನ ಸಮೂಹ ವಿದ್ಯಾಪ್ರಚಾರ' ದಿನಾಚರಣೆಯನ್ನು ಕಾಕೂರು, ಕುಮುಟೂರು, ನಾಲ್ಕೇರಿ ಮತ್ತು ಮಂಚಳ್ಳಿ ತಾಲೆಯವರು ಸೇರಿ ಆಚರಿಸಿದರು. ಜೇರ್ಮಾಡು ದೇವಸ್ಥಾನದಲ್ಲು ಕಾಫಿ ಪ್ಲಾಂಟರು ಶ್ರೀ. ಬೊಳ್ಳೆರ ಚಂಗಪ್ಪನವರ ಅಧ್ಯಕ್ಷತೆಯಲ್ಲು ಸಭೆ ಸೇರಲಾಯಿತು. ಅಧ್ಯಕ್ಷರು ಅಲ್ಲಿ ನೆರೆದವರಿಗೆಲ್ಲಾ ಊಟವನ್ನು ಕೊಟ್ಟರು. ಕೊರ್ಗ್ ಸ್ಟಾರ್ ಶ್ರೀ. ಜೆಕ್ಕೇರ ಅಪ್ಪಯ್ಯನವರ ಸಂಗೀತ ಮಜೋರಿಯ ನಂತರ ಸಭೆಯು ಬರಕಾಸ್ತಾಯಿತು.

ಬತ್ತದ ಕ್ರಯ.

ಜೋಫ್ ಕಮೀಷನರವರು ಗಂಜ್ರ ಸರಕಾರದ ಮಂಜೂರಾತಿಯಿಂದ ಬತ್ತದ ಬೆಲೆಯನ್ನು ಈ ಕೆಳಗಿನ ರೀತಿ ನಿಶ್ಚಯಿಸಿರುವರು.

ಜೀರಿಗೆ ಸಣ್ಣ ೧ ಗಾಡಿಗೆ	ರೂ. ೨೬೨
ಕೂಯಮುತ್ತು ಸಣ್ಣ	ರೂ. ೨೧೧
ಬಿಳಿಯ, ಕೆಂಬತ್ತಿ ಮತ್ತು ಮಳ್ಳ ಗಾಡಿ ೧ ಕ್ಕೆ	ರೂ. ೨೦೨
ಬೊಡ್ಡಿ ಮತ್ತು ಕರ್ತ	ರೂ. ೧೯೪

ಬತ್ತವನ್ನು ಮೂರಾಟದ ಸ್ಥಳದಿಂದ ತುಂಬುವ ಸೆಂಟರಿಗೆ ಇರುವ ಚಾರ್ಜನ್ನು ಏಜೆಂಟರುಗಳು, ಸಬ್ ಏಜಂಟರುಗಳು ಮತ್ತು ಸರಕಾರಕ್ಕೆ ಗವ ಕಮೀಷನ್ನು ಗಾಡಿ ಒಂದರ ಈ ಕೆಳಗಿನ ರೀತಿ ಇದೆ.

ಕಣದಿಂದ ಮೇಡಂಗ್ ಸೆಂಟರಿಗೆ	
ಸಾಗಿಸುವ ಚಾರ್ಜು ಮೈಲಿಗೆ	೧-೧೨-೦
ಯಂತೆ ಮೂರು ಮೈಲಿಗೆ	೪-೧೪-೦
ಸಬ್ ಏಜಂಟರ ಕಮೀಷನ್	೫-೪-೦
ಮುಖ್ಯ ಏಜಂಟರ ಕಮಿಷನ್	೦-೧೮-೦
ಸರಕಾರಿ ,,	೧-೦-೦
ಜಮ್ಮ	೧೨-೦-೦

ಕೊಡಗಿನಿಂದ ಹೊರಗೆ ಹೋಗುವ ಬತ್ತಕ್ಕೆ ಮಾತ್ರ ಸರಕಾರಿ ಮತ್ತು ಮುಖ್ಯ ಏಜೆಂಟರ ಕಮಿಷನ್ ಮಾಫಿಯಾ ಮಾಡತಕ್ಕದ್ದು.

ರೇಷನ್ ಷಾಪುಗಳಲ್ಲಿ ಬಿಳಿಯ, ಕೆಂಬತ್ತಿ ಮತ್ತು ಮಳ್ಳ ಬತ್ತದ ಅಕ್ಕಿಯನ್ನು ರೂ. ಗೆ 2½ ಸೇರಿನಂತೆ ಮಾರತಕ್ಕದ್ದು.

ಈ ನೋಲಿನ ದರವು ಡಿಸೆಂಬರು ತಾ. ೧೫ರಿಂದ ಜಾರಿಗೆ ಬರುವದಿದೆ. ಇದು ಯಾವಾಗಲಾದರೂ ಬದಲಾಯಿಸಪಡಬಹುದಾಗಿದೆ. ಆದುದರಿಂದ ಇಡೀ ವರ್ಷಕ್ಕೆ ಶಾಯಂ ಆದದ್ದೆಂದು ತಿಳಿಯಬಾರದು.

ಮೇಲಿನ ದರಗಳನ್ನು ಉಲ್ಲಂಘಿಸಿದವನನ್ನು ಖಾನೂನು ಮೇರೆ ಶಿಕ್ಷೆಗೆ ಗುರಿಪಡಿಸಲಾಗುವದು.

ಕೃತಜ್ಞತಾ ವಂದನೆ.

ಈಗ್ಗೆ ಎರಡು ವರ್ಷಗಳಿಂದ ಖಾಯಿಲಸ್ಥರಾಗಿದ್ದ ಶ್ರೀ ಚಿಪ್ಪುಡೀರ ಬೆಳ್ಯಪ್ಪನವರು ತಾ 4-11-51ರಲ್ಲಿ ಶಿವಾಧೀನರಾದ ನಮ್ಮ ತಂದೆಯವರ ವಿಯೋಗ ಕಾಲದಲ್ಲಿ ಮಾಡಿದ ಖರ್ಚು, ಮತ್ತು ಪತ್ರಗಳ ಮೂಲಕವೂ ನಮ್ಮ ಬಂಧು ಮಿತ್ರರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಬರೆದು ತಿಳಿಸಲು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೂ ನಮ್ಮ ಕೃತಜ್ಞತಾ ವಂದನೆಗಳನ್ನು ಅರ್ಪಿಸುತ್ತೇವೆ.

ಚೆಪ್ಪುಡೀರ ಬಿ. ಸುಬ್ಬಯ್ಯ,
ಮತ್ತು ಸಹೋದರರು.

For Sale.

Austin Saloon, A-70, 1950 model, I6 H. P. in perfect condition, mileage 14,000.

Apply:-

MURPHY,
Raigode Estate,
Sidapur.

ಕೊಡಗಿನ ಭವಿಷ್ಯ ನಿರ್ಣಯ ಜನತೆಯ ಹಕ್ಕು

ಲೇ:-"ದೇಶಪ್ರೇಮಿ"

ಕಳೆದ ವಾರದ "ಜನ್ಮ ಭೂಮಿ" ಪತ್ರಿಕೆಯಲ್ಲಿ ನೆಹರೂರವರು ಶ್ರೀ ಪಿ. ಐ. ಬೆಳ್ಯಪ್ಪನವರಿಗೆ ಬರೆದ ಪತ್ರದ ನಕಲೊಂದು ಪ್ರಕಟವಾಗಿತ್ತು. ಅದೇ ಪತ್ರವನ್ನು ಹಲವು ಪತ್ರಿಕೆಯವರೂ ಹಲವೆಡೆ ಹಂಚಲಾಗುತ್ತಿದೆ. ಈ ಪತ್ರದ ಹಿನ್ನೆಲೆಯಿಂದ ಕಾಂಗ್ರೆಸಿಗರು ಅಪಪ್ರಚಾರ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಆ ವಿಚಾರದಲ್ಲಿ ಜನತೆಯು ನೆಹರೂ ಪತ್ರದ ಒಸ್ನೆಲೆ ಏನು ಅವರ ನಿಜ ಅರ್ಥವೇನೆಂಬುದನ್ನು ಪರಿಶೀಲಿಸಿ ತಿಳಿಯಬೇಕು.

ಕೊಡಗಿನಲ್ಲಿ ಚುನಾವಣೆಯು ಹತ್ತಿರ ಬಂದಿದೆ. ಉಮೇದುವಾರರನ್ನು ನಿಶ್ಚಿಸುವ ಪರ್ಯಾಲೋಚನೆ ನಡೆದಿತ್ತು. ಕೊಡಗಿನಲ್ಲಿ ಕಾಂಗ್ರೆಸು ಒಂದು ಪಕ್ಷವಲ್ಲದೆ ಬೇರೆ ಬಲಯುತವಾದ ಪಕ್ಷಗಳಿಲ್ಲ. ಆದರೆ ಕೊಡಗಿನ ಭವಿಷ್ಯದ ಬಗ್ಗೆ ಕಾಂಗ್ರೆಸಿನವರೊಳಗೆ ಭಿನ್ನಾಭಿಪ್ರಾಯವಿದ್ದು ಒಂದು ಪಕ್ಷವು ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಬೇಕೆಂದೂ, ಕೆಲವರು ಕೊಡಗನ್ನು ಈಗಿರುವಂತೆ ಪ್ರತ್ಯೇಕವಿಟ್ಟುಕೊಳ್ಳಬೇಕೆಂದೂ ನಿಶ್ಚಿತ ಅಭಿಪ್ರಾಯ ಉಳ್ಳವರಾಗಿ ಕಾಂಗ್ರೆಸಿನಲ್ಲಿ ಸ್ಪಷ್ಟ ಎರಡು ಪಕ್ಷಗಳಿದ್ದವು. ಆದ್ದರಿಂದ ಚುನಾವಣೆಗೆ ಕಾಂಗ್ರೆಸು ತನ್ನ ಉಮೇದುವಾರರನ್ನು ನಿಲ್ಲಿಸುವ ಕಾಲಕ್ಕೆ ಹೇಗೆ ನಿಲ್ಲಿಸಬೇಕೆಂಬ ಪ್ರಶ್ನೆಯು ಎದುರಿಗೆ ಬಂದಿತು.

ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬ ಪಕ್ಷವು ಈ ವಿಚಾರವಾಗಿ ಅಳವಾಗಿ ಆಲೋಚಿಸಿದೆ. ಕೊಡಗಿನ ಭವಿಷ್ಯದ ಪ್ರಶ್ನೆಯೊಂದು ಕೊಡಗಿನ ಜನರ ಮುಂದೆ ಕಳೆದ ಕಾಲು ಶತಮಾನದಿಂದಲೂ ಒಂದಿಲ್ಲೊಂದು ರೀತಿಯಿಂದ ಆಗಾಗ್ಗೆ ತಲೆ ಎತ್ತಿದ್ದರೂ ಪ್ರಶ್ನೆಯು ಬಗೆಹರಿಯದೆ ಉಳಿದಿದೆ. ಈ ಪ್ರಶ್ನೆಯ ಕಾರಣವಾಗಿ ಕಾಂಗ್ರೆಸಿನಲ್ಲೂ ದೇಶದ ಜನತೆಯಲ್ಲೂ ಸ್ಪಷ್ಟ ಎರಡು ಪಂಗಡಗಳಾಗಿವೆ. ಈ ಎರಡು ಪಂಗಡಗಳು ಪರಸ್ಪರ ಹೊಡೆದಾಡಿಕೊಂಡು ದೇಶಕ್ಕೆ ತುಂಬಾ ಹಾನಿಯಾಗುತ್ತಿದೆ. ಅಡಳಿತದ ವಿಚಾರವೇ ಇರಲಿ, ಬೇರೆ ಯಾವುದೇ ಕಾರ್ಯವಿರಲಿ, ಅತನು ಸಂಯೋಜನಾವಾದಿ, ಈತನು ಪ್ರತ್ಯೇಕವಾದಿ ಎಂಬ ಭಾವನೆಯೇ ಹೆಚ್ಚಿ ಪ್ರತಿ ಕುಟುಂಬವಲ್ಲಿಯೂ ಈ ವಾದ ತಲೆದೋರಿ ಅಣ್ಣ ತಮ್ಮಂದಿಯರಾಗಿ, ನೆಂಟರು ಬಂಧುಗಳಾಗಿದ್ದವರಲ್ಲಿಯೂ ಭಿನ್ನತೆ ತಲೆದೋರಿ ರಾಜಕೀಯ ಕ್ಷೇತ್ರ ಒಂದರಲ್ಲಿಯೇ ಅಲ್ಲ; ಸಾಮಾಜಿಕ ಕ್ಷೇತ್ರದಲ್ಲೂ ಪಕ್ಷ ಸಂಗಡಗಳಾಗಿವೆ. ಈ ಕಾರಣದಿಂದ ದೇಶದ ಸರಕಾರವೂ ಯಾವುದೇ ಜನಹಿತ ಕೆಲಸ ಮಾಡದೆ ಈ ಎರಡು ಪಂಗಡಗಳ ಕಚ್ಚಾಟವನ್ನು ನೋಡುತ್ತಾ ತಾನು ನಿಷ್ಕ್ರಿಯವಾಗಿ ತಟಸ್ಥ ಕುಳಿತಿದೆ. ಅದೇ ಅಲ್ಲ; ಈ ಎರಡು ಪಂಗಡಗಳಿರುವುದರಿಂದ ಯಾವುದೇ ಜನಹಿತ ಕೆಲಸ ಮಾಡಲಾಗುವುದಿಲ್ಲ. ಒಂದು ಕೆಲಸ ಕೈಕೊಂಡರೆ ಒಂದು ಪಕ್ಷಕ್ಕೆ ಹಿತವಾಗಿ ಮತ್ತೊಂದಕ್ಕೆ ಅಹಿತವಾಗಬಹುದಾದ್ದರಿಂದ ತನು

ಪಂಡಿತ ನೆಹರೂರವರ ಪತ್ರದ ಅಭಿಪ್ರಾಯ.

ಗೆ ಯಾವುದೇ ಕೆಲಸ ನಡೆಸಲು ಸಾಧ್ಯವಾಗುತ್ತಿಲ್ಲವೆಂದು ಸ್ಪಷ್ಟ ಹೇಳುತ್ತಿದೆ. ಈ ರೀತಿಯ ಒಂದು ವಾತಾವರಣವು ದೇಶದಲ್ಲಿ ಉಂಟಾಗಿ ಕೊಡಗಿನ ಜನತೆಗೆ ಆಗುತ್ತಿರುವ ಅಹಿತವನ್ನು ಪ್ರತ್ಯೇಕವಾದಿ ಪಕ್ಷವು ಮನಗಂಡಿದೆ.

ಇಂಥಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೊಡಗಿಗೆ ಸುಧಾರಣೆ ದೊರೆತು ಆ ಬಗ್ಗೆ ಸಾರ್ವತ್ರಿಕ ಚುನಾವಣೆಯು ಏರ್ಪಾಡಾಗುತ್ತಿರುವಲ್ಲಿ, ಪ್ರತ್ಯೇಕವಾದಿ ಪಕ್ಷವು ಸುಧಾರಣಾ ಪ್ರಶ್ನೆಯನ್ನು ನಿರ್ವಿಕಾರ ದೃಷ್ಟಿಯಿಂದ ಪರಿಶೀಲಿಸಿದೆ. ಈಗ ಕೊಡಗಿಗೆ ಬಂದಿರುವ ಸುಧಾರಣೆಯು ಸರಿಯಾದ ರೀತಿಯಲ್ಲಿ ಜಾರಿಗೆ ಬಂದು ಅನಂತರ ದೇಶದ ಜನರ ಹಿತಸಾಧನೆಯಾಗಬೇಕಾದರೆ ಕೊಡಗಿನಲ್ಲಿರುವ ಈ ಎರಡು ಪಕ್ಷಗಳ ಹೊಯ್ದಾಟವು ನಿಲ್ಲಬೇಕು. ಈ ಎರಡೂ ಪಕ್ಷಗಳು ಮುಂದಿನ ಶಾಸನ ಸಭೆಗೆ ಚುನಾಯಿತರಾಗಿ ಈ ಹಿಂದಿನಂತೆ ಶಾಸನ ಸಭೆಯಲ್ಲಿ ಅವರು ಪರಸ್ಪರ ಹೊಯ್ದಾಡಿಕೊಳ್ಳುವುದಾದರೆ ಈ ಸುಧಾರಣೆಯಿಂದ ಜನತೆಗೆ ಹೆಚ್ಚಿನ ಪ್ರಯೋಜನ ದೊರೆಯುವುದೆಂಬುದು ಪ್ರತ್ಯೇಕವಾದಿ ಪಕ್ಷಕ್ಕೆ ಖಚಿತವಾಗಿದೆ. ಆದ್ದರಿಂದ ಮುಂಬರುವ ಶಾಸನಸಭೆಯು ಅಧಿಕಾರ ವಹಿಸಿ ಈ ಸುಧಾರಣೆಗಳನ್ನು ಜಾರಿಯಲ್ಲಿ ತರುವ ಮೊದಲು ಕೊಡಗಿನ ಭವಿಷ್ಯದ ಪ್ರಶ್ನೆಯನ್ನು ಜನತೆಯು ಮುಂದಿಟ್ಟು ಆದರಿಂದ ಆರಿಸಲ್ಪಟ್ಟ ಬಹುಮತ ಪಕ್ಷವು ನಿರ್ಭಾದಕವಾಗಿ ಈ ಸುಧಾರಣೆಗಳನ್ನು ಜನತೆಯ ಹಿತದೃಷ್ಟಿಯಿಂದ ಜಾರಿಯಲ್ಲಿ ತರುವ ಆನು ಮಾಡಬೇಕಾದುದು ಕರ್ತವ್ಯವೆಂದು ಪ್ರತ್ಯೇಕವಾದಿ ಪಕ್ಷವು ನಿರ್ಣಯಿಸಿದೆ. ಏಕೆಂದರೆ ಮೇಲೆ ಹೇಳಿದಂತೆ ಎರಡೂ ಪಕ್ಷಗಳು ಸಮಬಲದಿಂದ ಶಾಸನಸಭೆಯಲ್ಲಿ ಇರುವ ಪಾದರೆ ಕೊಡಗಿನಲ್ಲಿ ಬಲಯುತವಾದ ಮಂತ್ರಿಮಂಡಲವನ್ನೇ ರಚಿಸಲು ಆಗದೆ ನಮ್ಮ ಕೇಂದ್ರದ ಪ್ರೆಸಿಡೆಂಟರು ಸುಧಾರಣಾ ಮಸೂದೆಯನ್ನು ಬದಿಗೊತ್ತಿ ನಮ್ಮ ರಾಜ್ಯಪುನರ್ರಚನೆಯು ಅರ್ಧದಲ್ಲೇ ನೆಕ್ಷನಿನಂತೆ ಕೊಡಗಿನ ಅಡಳಿತವನ್ನು ಈ ಹಿಂದಿನಂತೆ ಒಬ್ಬ ಚೀಫ್ ಕಮಿಷನರ, ಲೆಫ್ಟನೆಂಟ್ ಗವರ್ನರರ ಇಲ್ಲವೇ ನೇರೆಯ ಸರಕಾರದ ಮೂಲಕ ನಡೆಸುವ ಪರಿಸ್ಥಿತಿ ಬಂದೇ ಬರುವುದು. ಆದ್ದರಿಂದ ಈಗ ಬಂದಿರುವ ಸುಧಾರಣೆಯು ಜನರಿಗೆ ಹಿತಕಾರಕವಾಗಬೇಕಾದರೆ ಮುಂದಿನ ರಾಜಸನಸಭೆಯಲ್ಲಿ ಯಾವುದಾದರೂ ಒಂದು ಪಕ್ಷವು ದೊಡ್ಡ ಬಹುಮತದಿಂದ ಆರಿಸಲ್ಪಡುವಂತೆ ಮಾಡಬೇಕಾದ್ದು ಕರ್ತವ್ಯ.

ಕೊಡಗಿನಲ್ಲಿರುವ ಎರಡು ಪಕ್ಷಗಳಲ್ಲಿ ತನುಗೆ ಬೇಕಾದುದನ್ನು ಆರಿಸಿಕೊಂಡು ಬೇಡವಾದುದನ್ನು ಮೂಲೆಗುಂಪು ಮಾಡುವ ಅಧಿಕಾರ ಕೊಡಗಿನ ಓಟರುಗಳ ಕೈಯ್ಯಲ್ಲಿದೆ. ಜನತೆಯು ಆ ರೀತಿ ತನಗೆ ಬೇಕಾದ ಪಕ್ಷವನ್ನು ಆರಿಸಲು ಅನುವಾಗುವಂತೆ ತಮ್ಮ ತಮ್ಮ ತತ್ವಗಳ

ಮೇಲೆ ಕೊಡಗಿನ ಎರಡು ಪಕ್ಷಗಳೂ ಚುನಾವಣೆಗೆ ನಿಲ್ಲಬೇಕಾದುದು ಧರ್ಮ. ಈ ದೃಷ್ಟಿಯಿಂದ ಪ್ರತ್ಯೇಕವಾದಿ ಪಕ್ಷದ ಪರ ಶ್ರೀ ಪಿ ಐ. ಬೆಳ್ಯಪ್ಪನವರು ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ನೆಹರೂರವರಲ್ಲಿಗೆ ಹೋಗಿ ತನ್ನ ಅಭಿಪ್ರಾಯವನ್ನು ಮಂಡಿಸಿದ್ದರು. ಕೊಡಗಿನ ಕಾಂಗ್ರೆಸ್ಸಿಗರಲ್ಲಿ ಎರಡು ಪಕ್ಷವಿದೆ. ಈ ಎರಡೂ ಪಕ್ಷಗಳಿಂದ ಉಮೇದುವಾರರನ್ನು ಆರಿಸಿ ಕಾಂಗ್ರೆಸು ೨೪ ಜನರನ್ನು ನಿಲ್ಲಿಸಿದರೆ ಈ ೨೪ ಜನರಲ್ಲಿ ಪ್ರತ್ಯೇಕವಾದಿಗಳೂ, ಸಂಯೋಜನಾವಾದಿಗಳೂ, ಸಮಬಲದಲ್ಲಿ ಸಮಿಶ್ರವಾಗಿದ್ದು ಮುಂದಿನ ಶಾಸನಸಭೆಯು ಈ ಪಕ್ಷಾಭಿಮಾನಿಗಳ ಕಾಳಗದ ರಂಗಸ್ಥಳವಾಗಿ, ದೊರೆತಿರುವ ಸುಧಾರಣೆಯಿಂದ ಜನಹಿತವಾಗಲಾರದು. ಆದ್ದರಿಂದ ಸ್ಪಷ್ಟವಾಗಿ ಜನತೆಯು ತನಗೆ ಬೇಕಿರುವ ಪಕ್ಷವನ್ನು ಆರಿಸಿಕೊಳ್ಳಲು ಅನುಕೂಲವಾಗಲಂತೆ ಎರಡು ಪಕ್ಷದ ವರನ್ನು ತಮ್ಮ ತತ್ವಕ್ಕನುಸಾರವಾಗಿ ಉಮೇದುವಾರರನ್ನು ಕಾಂಗ್ರೆಸಿನ ಹೆಸರಿನಲ್ಲಿ ನಿಲ್ಲಿಸಲು ಬಿಡಬೇಕು, ಪ್ರತ್ಯೇಕವಾದಿ ಪಕ್ಷವು ೨೪ ಜನರನ್ನೂ, ಸಂಯೋಜನಾವಾದಿ ಪಕ್ಷವು ೨೪ ಜನರನ್ನೂ ಕಾಂಗ್ರೆಸಿನ ಹೆಸರಿನಲ್ಲೇ ನಿಲ್ಲಿಸಲಿ. ಬಹುಶಃ ಕಾಂಗ್ರೆಸಿನ ಹೆಸರಿನಲ್ಲಿ ಎರಡು ರೀತಿಯ ಉಮೇದುವಾರರನ್ನು ನಿಲ್ಲಿಸುವುದು ಸಾಯಲ್ಲವೆಂದು ತೋರಿದರೆ ಈ ಎರಡು ಪಕ್ಷಗಳೂ ಕಾಂಗ್ರೆಸಿನ ಹೆಸರನ್ನು ಹಾಕಿಕೊಳ್ಳದೆ ತಮ್ಮ ತತ್ವದ ಬಲದಿಂದ ಸಂಯೋಜನಾ ಹಾಗೂ ಪ್ರತ್ಯೇಕವಾದಿಗಳೆಂದು ಚುನಾವಣೆಗೆ ನಿಲ್ಲಲಿ. ಎರಡು ರೀತಿಯಲ್ಲಿ ಯಾವುದಾದರೊಂದನ್ನು ಮಾಡಬೇಕೆಂದು ನಹರೂರವರನ್ನು ಕೇಳಲಾಯಿತು. ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ನೆಹರೂರವರು ಕಾಂಗ್ರೆಸಿನೊಳಗೇ ಎರಡು ರೀತಿಯ ಉಮೇದುವಾರರನ್ನು ನಿಲ್ಲಿಸಲಿಕ್ಕೂ, ಕಾಂಗ್ರೆಸಿನ ಹೆಸರಿಲ್ಲದೆ ಈ ತತ್ವಗಳನ್ನು ಮುಂದಿಟ್ಟು ಚುನಾವಣೆಯಲ್ಲಿ ಕಾಂಗ್ರೆಸಿಗರು ಭಾಗವಹಿಸಲಿಕ್ಕೂ ಒಪ್ಪಲಿಲ್ಲ. ಹಾಗೆ ಒಪ್ಪುವುದೂ ಅವರಿಗೆ ಸಾಧ್ಯವಿರಲಿಲ್ಲ. ಏಕೆಂದರೆ ಕಾಂಗ್ರೆಸ್ ಸಂಸ್ಥೆಯು ಭಾಷಾವಾರು ಪ್ರಾಂತರಚನೆ ಮಾಡಬೇಕೆಂಬ ತತ್ವಕ್ಕೆ ಬದ್ಧವಾಗಿದೆ. ತನ್ನ ಚುನಾವಣಾ ಘೋಷಣೆಯಲ್ಲಿ ಇದನ್ನು ಜನತೆಯ ಮುಂದಿಟ್ಟು ಆದಷ್ಟು ಬೇಗ ಈ ಪ್ರಾಂತರಚನೆ ಮಾಡುವುದೇ ತನ್ನ ಗುರಿಯೆಂದು ಸಾರಿದೆ. ಈ ತತ್ವದ ಕಾರಣದಿಂದಲೇ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯು ಕೊಡಗನ್ನು ಹೇಗಾದರೂ ಮಾಡಿ ಮೈಸೂರಿಗೋ, ಭಾವೀ ಕರ್ನಾಟಕಕ್ಕೋ ಸೇರಿಸಿಬಿಡಬೇಕೆಂದು ಈ ಹಲವು ವರ್ಷಗಳಿಂದ ಶತಪ್ರಯತ್ನ ಮಾಡುತ್ತಿದೆ. ಅದಕ್ಕೆ ಅಧೀನವಿರುವ ಕೊಡಗು ಜಿಲ್ಲಾ ಕಾಂಗ್ರೆಸ್ಸೂ ಆ ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಒಪ್ಪಲೇಬೇಕು. ಆದ್ದರಿಂದ ಕೊಡಗಿನ

ಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಚುನಾವಣೆಗೆ ನಿಂತವರು ಕೊಡಗನ್ನು ಇಂದಲ್ಲ ನಾಳೆ ಯಾದರೂ ಬೇರೆ ಪ್ರಾಂತ್ಯಕ್ಕೆ ಸೇರಿಸುವ ತತ್ವವನ್ನು ಒಪ್ಪಲೇಬೇಕು. ಇಲ್ಲದಿದ್ದರೆ ಅವರಿಗೆ ಕಾಂಗ್ರೆಸಿಗರೆನ್ನುವ ಹಕ್ಕಿರಲಾರದು. ಆದ ಕಾರಣವೇ ಇಂದು ಕೊಡಗು ಕಾಂಗ್ರೆಸು ಕೇವಲ ಸಂಯೋಜನಾವಾದಿಗಳನ್ನೇ ತಮ್ಮ ಉಮೇದುವಾರರಾಗಿ ನಿಲ್ಲಿಸಿದೆ.

ಕಾಂಗ್ರೆಸಿನ ತತ್ವ ಹೀಗಿದ್ದು, ಆದು ಕೊಡಗನ್ನು ಬೇರೆ ರಾಜ್ಯಕ್ಕೆ ಸೇರಿಸಲು ಕಂಕಣಬದ್ಧವಾಗಿ ಪ್ರಯತ್ನಿಸುತ್ತಿರುವಾಗ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬುವವಂಗೆ ಅದರಲ್ಲಿ ಸ್ಥಾನವಿಲ್ಲವೆಂಬುದು ಸ್ವಯಂ ವ್ಯಕ್ತವಾಗುತ್ತದೆ.

ಇಂದಿನ ಕಾಂಗ್ರೆಸ್ ಉಮೇದುವಾರರಲ್ಲಿ ಕೆಲವರು ತಾವು ಪ್ರತ್ಯೇಕವಾದಿಗಳೆನ್ನುತ್ತಿದ್ದಾರೆ. ಅವರು ಬಹುಶಃ ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಓದಿರಲಾರರು. ಓದಿದ್ದರೆ ಕೇವಲ ಜನರ ಓಟು ಪಡೆಯಲು ಹಾಗೆ ಹೇಳುತ್ತಿರುವರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಕಾಂಗ್ರೆಸಿನ ಉಮೇದುವಾರ ಎಂದು ಹೇಳಿದರೆ ಸಾಕು. ಅತನು ಸಂಯೋಜನಾವಾದಿಯೆಂದು ಬೇರೆ ಹೇಳುವ ಅಗತ್ಯವಿಲ್ಲ. ಏಕೆಂದರೆ ಕಾಂಗ್ರೆಸ್ಸೇ ಸಂಯೋಜನಾ ತತ್ವಕ್ಕೆ ಬದ್ಧವಾಗಿರುವ ಸಂಸ್ಥೆಯಾಗಿದೆ.

ಆದ್ದರಿಂದ ಪ್ರತ್ಯೇಕವಾದಿ ಪಕ್ಷವು ಪರಿಸ್ಥಿತಿಯನ್ನು ಚೆನ್ನಾಗಿ ಆಲೋಚಿಸಿ ಕೊಡಗಿಗೆ ಬಂದಿರುವ ಸುಧಾರಣೆ ಜನ ಉಪಯುಕ್ತವಾಗಬೇಕಾದರೆ ಮುಂಬರುವ ಶಾಸನ ಸಭೆಯಲ್ಲಿ ಯಾವುದಾದರೂ ಒಂದೇ ಪಕ್ಷ ಹೆಚ್ಚಿನ ಬಹುಮತದಲ್ಲಿ ಬರಬೇಕು. ಹಾಗೆ ಬರಬೇಕಾದರೆ ಕೊಡಗಿನ ಭವಿಷ್ಯದ ವಿಚಾರದಲ್ಲೇ ಈ ಚುನಾವಣೆ ಆಗಿ ಜನರು ತಮಗೆ ಬೇಕಿರುವ ಪಕ್ಷವನ್ನು ಆರಿಸಿಕೊಳ್ಳುವ ಅನುಮಾಡಬೇಕು ಎಂಬುದು ಅದಕ್ಕೆ ಖಚಿತವಾಗಿದೆ. ಆದರೆ ಕಾಂಗ್ರೆಸು ಇದಕ್ಕೆ ತಯಾರಿಲ್ಲ. ಭವಿಷ್ಯದ ಬಗ್ಗೆ ತಮ್ಮ ತತ್ವವನ್ನು ಜನರ ಮುಂದಿಟ್ಟು ಜನರ ಅಭಿಪ್ರಾಯ ತೆಗೆದು ಅದರಂತೆ ವರ್ತಿಸುವ ಅಭಿಪ್ರಾಯ ಅದಕ್ಕಿಲ್ಲ ಬದಲು ಈಗಿರುವ ಪಕ್ಷ ರಾಜಕೀಯದ ಘರ್ಷಣೆಯೇ ಮುಂದೆಯೂ ಇರಬೇಕೆಂದು ಕಾಂಗ್ರೆಸು ಬಯಸಿದಂತಿದೆ. ಕಾಂಗ್ರೆಸು ನಿಜವಾಗಿಯೂ ಜನರ ಅಭಿಮತಕ್ಕೆ ಹೆದರುತ್ತಿರುವಂತೆ ತೋರುತ್ತಿದೆ. ತಮ್ಮ ಚುನಾವಣಾ ಘೋಷಣೆಯು ಹೀಗಿದೆ. ಕರ್ನಾಟಕ ಏಕೀಕರಣವು ನಮ್ಮ ಗುರಿ ಎಂದು ಹೇಳಿ ಜನರ ಮುಂದೆ ನಿಲ್ಲುವ ಎದೆಗಾರಿಕೆ ಅದಕ್ಕಿಲ್ಲವಾಗಿದೆ. ಆದ್ದರಿಂದ ಅವರು ಪಂಡಿತ ನೆಹರೂರವರ ಬಾಯಿಂದ 'ಕೊಡಗಿನ ಭವಿಷ್ಯದ ಪ್ರಶ್ನೆ ಈಗ ಇಲ್ಲ' ಎಂದು ಹೇಳಿಸಿದ್ದಾರೆ. ಕಳೆದ ಕಾಲುಶತಮಾನದಿಂದ ಕೊಡಗಿನ ರಾಜಕೀಯರಂಗದಲ್ಲಿ ಉಳಿದಿರುವ ಏಕ ಪ್ರಶ್ನೆಯಾದ ಈ ಕೊಡಗಿನ ಭವಿಷ್ಯದ ವಿಚಾರವು ಇಂದು ಏಕೆ ಇಲ್ಲ ಎಂದು ಪ್ರತಿಯೊ

ಬ್ಬನೂ ಪ್ರಶ್ನಿಸಿಕೊಳ್ಳಬೇಕಾಗಿದೆ. ಈ ಟ್ಟೂಬ ಈಟುಂಬಗಳಲ್ಲಿ ಘರ್ಷಣೆಗೆ ಈಡು ಮಾಡಿ ಬಂಧು ಬಾಂಧವ್ಯವನ್ನು ದೂರಮಾಡಿ ಇಂದಿನ ಕೊಡಗಿನ ಪ್ರಧಾನ ಪ್ರಶ್ನೆಯಾದ ಈ ವಿಚಾರವು ಏಕೆ ಇಂದು ಇಲ್ಲ? ಸಂಯೋಜನಾವಾದಿಗಳು ಕೇವಲ ಜನತೆಯ ಓಟನ್ನು ಯಾವುದೋ ಸೋಗಿನಿಂದ ಪಡೆಯುವ ಕಾರಣದಿಂದ ವರಳೊಳಗೆ ತಲೆ ಅಡಗಿಸಿದ ಉಷ್ಟ್ರ ಪಕ್ಷಿಗಳಂತೆ ಕಾಂಗ್ರೆಸಿನ ಹೆಸರನ್ನು ಹೇಳಿಕೊಂಡು ತಲೆಮರೆಸಿಕೊಂಡರೆ ದೇಶದ ಈ ಪ್ರಶ್ನೆ ಇಲ್ಲದಾಗುವದೇ? ತಮ್ಮ ಕಾಂಗ್ರೆಸಿನ ಮುಸುಕನ್ನು ತೆಗೆದು ಕೊಡಗಿನ ಭವಿಷ್ಯದ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟ ವಚನಗಳಿಂದ ಕಾಂಗ್ರೆಸು ಉಪದೇಶಕರಾರು ಹೇಳಲಿ. ಪ್ರತ್ಯೇಕವಾದಿ ಪಕ್ಷವು ತನ್ನ ನಿಶ್ಚಿತ ನೀತಿಯನ್ನು ಪ್ರಕಟಪಡಿಸಿ ಇಂದು ಚುನಾವಣೆಗೆ ಆ ತತ್ವಕ್ಕಾಗಿಯೇ ಆದರ ಹೆಸರಿನಲ್ಲಿಯೇ ನಿಂತಿದೆ.

ಪಂಡಿತ ನೆಹರೂರವರ ಬಾಯಿಂದ ಈ ಪ್ರಶ್ನೆ ಇಂದು ಜನತೆಯ ಮುಂದಿಲ್ಲವೆಂದು ಹೇಳಿಸಿದಾಕ್ಷಣ ಕಾಲು ಶತಮಾನದಿಂದ ಬಗೆ ಹರಿಯದೆ ಉಳಿದಿರುವ ಈ ಭವಿಷ್ಯ ಪ್ರಶ್ನೆಯು ಬಗೆ ಹರಿಯದಂತಾಗಲಿಲ್ಲ. ಕೊಡಗಿನ ಭವಿಷ್ಯವನ್ನು ನಿರ್ಣಯಿಸದಿದ್ದರೆ ಬಂದಿರುವ ಸಂಧಾರಣೆಯು ವಿಫಲವಾಗುವದೆಂಬುದನ್ನು ಎಲ್ಲರೂ ಒಪ್ಪಬೇಕು. ಆದ್ದರಿಂದ ಈ ಪ್ರಶ್ನೆ ಈಗ ಬಗೆ ಹರಿಯಬೇಕು. ಈ ಹಿಂದಿನಿಂ ಕೊಡಗಿನ ಭವ್ಯವನ್ನು ಕೊಡಗಿ ನರೇ ನಿರ್ಣಯಿಸಬೇಕಲ್ಲದೆ ದೆಲ್ಲಿ ರುವ ಅಧಿಕಾರಿಗಳೂ ಅಲ್ಲ; ಕಾಂ ಗರಿಂದೂ, ದೇಶದ ಮುಂದಾಳುಗಳೆಂ ಹೇಳಿಕೊಳ್ಳುವವರಾಲ್ಯಾರೂ ಜನರಲ್ಲಿಲ್ಲವೆಂ ಸಾರಿ ಹೇಳುತ್ತಾ ಬಂದಿದ್ದೇವೆ. ಇಂ ಕಾಂಗ್ರೆಸ್ಸಿನವರೆಂದು ಹೇಳಿಕೊಳ್ಳು ರುವ ಕಾಂಗ್ರೆಸ್ಸಿಗರು ದೇಶದ ಭವಿಷ್ಯ ನನ್ನು ಜನತೆಯನ್ನು ಕೇಳದೆ ಕೇಂದ್ರ ಸರಕಾರವೇ ನಿರ್ಣಯಿಸಿಬಿಡಬೇಕೆಂದು ಕೇಂದ್ರ ಸರಕಾರಕ್ಕೂ, ರಾಜ್ಯಪುನರ್ ಸಭೆಗೂ, ಆಗಾಗ್ಗೆ ಅಫೀಲು ಮಾಡಿದ್ದಾರೆ, ಅದಕ್ಕಾಗಿ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ರೀತಿಯಲ್ಲಿ ಜನಾಭಿಪ್ರಾಯಕ್ಕೆ ಹೆದರಿ ಜನತೆಗೆ ದ್ರೋಹ ಬಗೆಯಲೆತ್ನಿಸಿದವರು ಇಂದು ಕೊಡಗಿನ ಭವಿಷ್ಯದ ಪ್ರಶ್ನೆ ಜನತೆಯ ಮುಂದೆ ಇಲ್ಲ ಎನ್ನುವದರಲ್ಲಿ ಆಶ್ಚರ್ಯವಿಲ್ಲ. ಪಂಡಿತ ಜವಾಹರರು ಭವಿಷ್ಯ ನಿರ್ಣಯದ ವಿಚಾರದಲ್ಲಿ ಜನರ ಅಭಿಮತವನ್ನು ಅನುತೀ ವರ್ತಿಸಬೇಕೆಂದೂ, ಈ ಪ್ರಶ್ನೆಯನ್ನು ಜನತೆಯ ಮುಂದಿಡದೆ ಆರಿಸಿ ಬಂದ ಶಾಸನ ಸಭೆಗೆ ಆ ವಿಚಾರದಲ್ಲಿ ತನ್ನ ನಿರ್ಣಯವನ್ನು ಮಾಡುವ ಹಕ್ಕಿದೆಯೂದರೂ ಅದಕ್ಕೆ ಹೆಚ್ಚಿನ ಬೆಲೆ ಇರಲಾರದೆಂದು ಅವರು ಹೇಳುತ್ತಾರೆ. ಆದರೆ ಇಂದು ಪ್ರತ್ಯೇಕವಾದಿ ಪಕ್ಷವು ಭವಿಷ್ಯದ ಪ್ರಶ್ನೆಯನ್ನು ಜನತೆಯ ಮುಂದೆ ಇಟ್ಟಿದೆ. ಕಾಂಗ್ರೆಸು ಈ ಪ್ರಶ್ನೆಯು ಜನತೆಯ ಮುಂದಿಲ್ಲವೆಂದು ಕಣ್ಣು ಮುಚ್ಚಿಕೊಂಡರೂ ಮತದಾರನಿಗೆ ಈ ಪ್ರಶ್ನೆಯು ಅರಿವಾಗಿದೆ. ಈ ಪ್ರಶ್ನೆಯು ಬಗೆ ಹರಿಸಲ್ಪಡಬೇಕೆಂಬ ಕಾರಣಕ್ಕಾಗಿಯೇ ಪ್ರತ್ಯೇಕವಾದಿ ಪಕ್ಷವು ಚುನಾವಣೆಗೆ ತನ್ನ ೨೪ ಹುರಿಯಾಳುಗಳನ್ನು ನಿಲ್ಲಿಸಿದೆಯೆಂಬುದು ಗೊತ್ತಿದೆ. ಹಾಗಿರುವದರಿಂದ ನೆಹರೂರವರ ಅಭಿಮತದಂತೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಒಂದು ತೀರ್ಮಾನವನ್ನು ಇಂದು ಚುನಾಯಿತವಾಗುವ ಕೊಡಗು ಶಾಸನ ಸಭೆಯು ಪಾಸು ಮಾಡಿದರೆ ಅದೇ ಜನಾಭಿಪ್ರಾಯವೆಂದು ಪರಿಗಣಿಸಲ್ಪಡುವದಲ್ಲದೆ ಅದರಂತೆಯೇ ಕೇಂದ್ರ ಸರಕಾರವೂ ವರ್ತಿಸುವದರಲ್ಲಿ ಸಂಶಯವಿಲ್ಲ.

ಆದ್ದರಿಂದ ನೆಹರೂರವರ ಪತ್ರವನ್ನು ದೊಡ್ಡದು ಮಾಡಿ ಪ್ರಚಾರ ಮಾಡುವದರಿಂದ ಕೊಡಗಿನ ಭವಿಷ್ಯದ ಪ್ರಶ್ನೆ ತೀರ್ಮಾನವಾದಂತಾಗಲಿಲ್ಲ. ಈ ಚುನಾವಣೆಯು ಕಾಲುಶತಮಾನದಿಂದ ಕೊಡಗಿನ ಅಭಿವೃದ್ಧಿಗೆ ಆತಂಕವಾಗಿರುವ, ಕೊಡಗಿನಜನ ಜೀವನದಲ್ಲಿ ಆನೈತಿಕತೆಗೂ ಕಾರಣವಾಗಿರುವ ಈ ಪ್ರಶ್ನೆಯು ತೀರ್ಮಾನವಾಗಲಿ. ಚುನಾವಣೆಯನಂತರವಾದರೂ ದೇಶದವರು ತಮ್ಮ ಮತದಾನದಿಂದ ಬೆಂಬಲಕೊಟ್ಟು ಆರಿಸುವ ಪಕ್ಷವು ದೇಶಕ್ಕೆ ಬಂದಿರುವ ಸಂಧಾರಣೆಯನ್ನು ಸರ್ವಜನರ ಹಿತದೃಷ್ಟಿಯಿಂದ ಜಾರಿಯಲ್ಲಿ ತರುವಂತಾಗಲಿ. ಆದ್ದರಿಂದ ಮತದಾರರು ಎಚ್ಚರಿಕೆಯಿಂದ ವರ್ತಿಸಬೇಕು. ಕಾಂಗ್ರೆಸ್ ಎಂದರೆ ಸಂಯೋಜನವಾದಿಗಳೆಂದೂ ಕೊಡಗಿನ ಸಂಯೋಜನೆಗೆ ಪ್ರಯತ್ನಿಸುವವರೆಂದೂ ತಿಳಿದು ಮತದಾನ ಮಾಡಬೇಕು. ಕೊಡಗು ಪ್ರತ್ಯೇಕವಿರುವದರಿಂದ ನಮಗೆ ಈ ಕೌನ್ಸಿಲಿದೆ, ಈ ಸಂಧಾರಣೆ ಇದೆ. ನಮ್ಮದೇ ಆದ ಸರಕಾರ ನಡಿಸುವ ಅಧಿಕಾರವಿದೆ. ಆದ್ದರಿಂದ ಯಾರೂ ನಮ್ಮ ವ್ಯಕ್ತಿತ್ವವನ್ನೂ, ಸ್ವಾತಂತ್ರ್ಯವನ್ನೂ ಕಳಕೊಳ್ಳುವ ರೀತಿ ವರ್ತಿಸದಿರಲಿ.

ನೆಹರೂ—ಬೆಳ್ಯಪ್ಪನವರ ಪತ್ರವ್ಯವಹಾರಗಳು.

(ಹಿನೇ ಪುಠದಿಂದ ಸಾಗಿದ್ದು)

ಅಂದಮೇಲೆ ಕೊಡಗಿನ ಭವಿಷ್ಯತ್ತಿನ ಪ್ರಾಮುಖ್ಯ ವಿಚಾರದಲ್ಲಿ ಎಸೆಂಬ್ಲಿಗೆ ಅಭಿಪ್ರಾಯ ಕೊಡುವ ಹಕ್ಕಿಲ್ಲವೆಂದಾಯಿತು. ನಮ್ಮ ಎಸೆಂಬ್ಲಿಗೆ ಇಂಥಾ ಹಕ್ಕಿಲ್ಲವೆಂದು ವಾದಿಸುತ್ತಿರುವ ಸಂಯೋಜನೆವಾದಿಗಳು ಇನ್ನಾದರೂ ಇದಕ್ಕೆ ಒಪ್ಪುವರೇ? ಅಲ್ಲದೆ ಸಂಸ್ಥಾನಗಳ ಮಂತ್ರಿಯಾದ ಶ್ರೀ ಗೋಪಾಲ ಸ್ವಾಮಿ ಐಯ್ಯಂಗಾರರು ಸಿ. ಭಾಗದ ಸ್ಟೇಟ್‌ಗಳ ಸಂಧಾರಣಾಮಸೂದೆಯನ್ನು ಪಾರ್ಲಿಮೆಂಟಿನ ಮುಂದಿಟ್ಟಾಗ—ಜವಾಬ್ದಾರಿ ಸರಕಾರ ಕೊಟ್ಟ ಮಾತ್ರಕ್ಕೆ ಸಂಯೋಜನೆಯು ಪ್ರಶ್ನೆಯು ಅಂತ್ಯವಾಗಲಿಲ್ಲವೆಂದೂ, ಆ ಪ್ರಶ್ನೆಯನ್ನು ಸಂಬಂಧಪಟ್ಟ ಜನರ ಅಭಿಪ್ರಾಯವನ್ನು ಸ್ಥಳೀಯ ಎಸೆಂಬ್ಲಿಯ ಮೂಲಕವೇ ತೆಗೆದು ತೀರ್ಮಾನಿಸಲಾಗುವುದೆಂದೂ ಸ್ಪಷ್ಟವಾಗಿ ಹೇಳಿರುವರು ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಆಖೈರು ತೀರ್ಮಾನ ಪಾರ್ಲಿಮೆಂಟ್ ಸಭೆಯಲ್ಲೇ ಆಗುವುದಾದರೂ ಸ್ಥಳೀಯ ಎಸೆಂಬ್ಲಿಗೆ ಅಲ್ಲಿಯ ಜನತೆಯ ಅಭಿಪ್ರಾಯವನ್ನು ಕೊಡುವ ಪೂರ್ಣ ಹಕ್ಕಿದೆ ಈ ಮುಖ್ಯ ವಿಚಾರವನ್ನು ಓಟರುಗಳ ಜೆನ್ನಾಗಿ ಗಮನಿಸಬೇಕು.

ಸಂಯೋಜನೆಯ ವಿಚಾರ ಓಟರುಗಳ ಮುಂದಿಡದಿದ್ದರೆ ಎಸೆಂಬ್ಲಿಯು ಈ ಸಂಬಂಧ ಕೊಡುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇಲ್ಲವೆಂಬುದು ಸರಿ. ಆದರೆ ಈಗಿನ ಚುನಾವಣೆಯಲ್ಲಿ ಸ್ಪರ್ಧಿಸುವ ಒಂದು ಪಾರ್ಟಿಯೂದ ಕಾಂಗ್ರೆಸು ಈ ವಿಚಾರವನ್ನು ಓಟರುಗಳ ಮುಂದಿಡದಿದ್ದರೂ, ಪ್ರತ್ಯೇಕ ಪಕ್ಷದವರು ಈ ಪ್ರಶ್ನೆಯ ಮೇಲೆಯೇ ಚುನಾವಣೆಗೆ ನಿಂತಿರುವರು. ಅಂದ ಮೇಲೆ ಕೊಡಗಿನ ಭವಿಷ್ಯತ್ತಿನ ಪ್ರಶ್ನೆ ಇಂದು ಓಟರುಗಳ ಮುಂದೆ ಇದೆಯೆಂದು ಎಲ್ಲರೂ ಒಪ್ಪಬೇಕು. ಅದರ ಮೇಲೆ ಓಟುಗಳೂ ಕೂಡ ಹೊಡಲ್ಪಡುವವು. ಹಾಗೆ ಚುನಾಯಿಸಲ್ಪಡುವ ಪ್ರತಿನಿಧಿಗಳು ಎಸೆಂಬ್ಲಿಯಲ್ಲಿ ಕೊಡುವ ಅಭಿಪ್ರಾಯಕ್ಕೆ ತುಂಬಾ ಬೆಲೆ ಇರುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯುವಾರರು.

ಕೊಡಗಿನ ಭವಿಷ್ಯತ್ತಿನ ವಿಚಾರಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲವೆನ್ನುವ ಪರಲ್ಲಿ ಅರ್ಥವಿಲ್ಲ. ಹಲವು ವರ್ಷಗಳಂದ ದೇಶದಲ್ಲಿ ಈ ವಿಚಾರವಾಗಿ ಬಹುಮಟ್ಟಿಗೆ ಗೊಂದಲ ನಡೆಯುತ್ತಿದ್ದು ಈಗ ಜನರಿಗೆ ತಮ್ಮ ಅಭಿಪ್ರಾಯವನ್ನು ಕೊಡಲು ದೊರೆತಿರುವ ಅವಕಾಶವನ್ನು ಉಪಯೋಗಿಸಬೇಡವೆಂಬುದು ವಿವೇಕವಲ್ಲ ಕಾಂಗ್ರೆಸಿನ ಚುನಾವಣಾ ಘೋಷಣೆಯು ೨ಲನೇ ಕಲಮಿನಲ್ಲಿ ಹೇಳಿರುವಂತೆ ಭಾಷಾವಾರು ಪ್ರಾಂತ್ಯ ರಚನೆಯೇ ಕ. ಪ್ರಾ. ಕಾ. ಕಮಿಟಿಯು ಗುರಿಯಾದರೆ ಅದರ ಅಧೀನದಲ್ಲಿರುವ ಕೊಡಗು ಕಾಂಗ್ರೆಸ್ ಸಮಿತಿಯೂ ಅದಕ್ಕೆ ತಲೆಬಾಗಲೇಬೇಕು. ಆದುದರಿಂದ ಕಾಂಗ್ರೆಸ್ ಉಪದೇಶದವಾರುಗಳಿಗೆ ಓಟು ಕೊಡುವವರೆಲ್ಲರೂ ಸಂಯೋಜನೆಗೆ ಒತ್ತಾಸೆ ಕೊಟ್ಟಂತೆಯೇ ಆಗುವುದು.

ಪಂಡಿತಜಿಯವರು ಹೇಳಿರುವದಾದರೂ ಕೆಲವು ಸಮಯದ ವರೆಗೆ ಸಂಯೋಜನೆಯ ಪ್ರಶ್ನೆ ಬರಲಾರದೆಂದು. ಆದರೆ ಅದು ಎಷ್ಟು ವರ್ಷಗಳ ವರೆಗೆಂದು ನಿರ್ದಿಷ್ಟವಾಗಿ ಹೇಳಿರುವುದಿಲ್ಲ. ಆದ ಕಾರಣ ಈ ಚುನಾವಣೆಯಲ್ಲಿಯೇ ಆದನ್ನು ತೀರ್ಮಾನಿಸುವುದು ಯುಕ್ತವಾಗಿದೆ. ಹೀಗೆ ಬೇಗನೆ ತೀರ್ಮಾನಿಸಿ ಪ್ರತ್ಯೇಕ ಪಕ್ಷದವರನ್ನು ಗೆಲ್ಲಿಸಿದರೆ ಮುಂದೆ ಬರುವ ಜನಾಬ್ದಾರಿ ಸರಕಾರಕ್ಕೆ ಜನರ ಹಿತದ ದೃಷ್ಟಿಯಿಂದ ಉತ್ತಮ ಕಾರ್ಯಗಳನ್ನು ಮಾಡಲು ಅನುಕೂಲ ಮಾಡಿ ಕೊಟ್ಟಂತಾಗುವುದು. ಬದಲು ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಸಂಯೋಜನಾ ಪಕ್ಷದವರಿಗೆ ಜಯವಾದರೆ ಎಸೆಂಬ್ಲಿಯ ಮೂಲಕ ಆವರ ತೀರ್ಮಾನದಂತೆ ಸಂಯೋಜನೆಗೆ ಅನುಕೂಲ ಮಾಡಿ ಕೊಟ್ಟಂತಾಗುವುದು. ಓಟರುಗಳು ಈ ವಿಚಾರ ಚೆನ್ನಾಗಿ ಆಲೋಚಿಸಬೇಕಾಗಿ ವಿನಂತಿ.

ಪ್ರತ್ಯೇಕ ಪಕ್ಷದ ಕಾರ್ಯದರ್ಶಿ.

ಮೂರಾಟಕ್ಕಿದೆ.

(1) ಮಡಿಕೇರಿ ಮುನಿಸಿಪಾಲಿಟಿ ಬ್ಲಾಕ್ ನಂ. 20ರ ಬ್ರಾಹ್ಮಣರ ಬೀದಿಯಲ್ಲಿ ಹೊಸದಾಗಿ ಕಟ್ಟಿರುವ ಎರಡು ಹಂಚಿನ ಮನೆ, ಮತ್ತು ಇವಕ್ಕೆ ಸೇರಿದ ಬಾವಿ ಹಿತ್ತಲು ಸಹಿತ.

(2) ಉ. ಕೊಡಗು ಕೊಡ್ಲಿಪೇಟೆ, ಕೂಡ್ಲೂರು ಗ್ರಾಮದಲ್ಲಿರುವ 7 ಏಕರೆ ತರ ಜಮೀನು, ಮತ್ತು ಇವಕ್ಕೆ ಸೇರಿದ ವರ್ಷಕ್ಕೆ 30 ಬಟ್ಟೆ ಗಾತ್ರಿಗೆ ಬರುವ 12 ಏಕರೆ ಕಾಫಿ ಜಮೀನು ಈ ಎರಡು ಆಸ್ತಿಗಳು ಮೂರಾಟಕ್ಕಿವೆ. ಖರೀದಿದಾರರು ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದು ಕೊಳ್ಳಬಹುದು.

ಕೆ. ನರಸಿಂಹ್ಮಮೂರ್ತಿ,
4-1 ಬ್ರಾಹ್ಮಣರ ಬೀದಿ,
ಮಡಿಕೇರಿ.

ವೀರಾಜಪೇಟೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯು ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಸಾ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಒಡಾಕ್ಟ್ರ.

'ಕೊಡಗಿಗೂ, ಇತರ ಪ್ರಾಂತ್ಯಗಳಂತೆ ಪ್ರಜಾ ಜವಾಬ್ದಾರಿ ಸರಕಾರ ಕೊಡಲಾಗುವುದು' ಎಂಬ ಇಂಡಿಯಾ ಸರಕಾರದ ಖಾನೂನು ಅದಂದಿನಿಂದ ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬರುತ್ತಿವೆ, ಅಲ್ಲದೆ ಈ ಮುಂಬರುವ ಚುನಾವಣೆಯು ನ್ನು ಕುರಿತು, ಅನೇಕ ಚಾತ್ಮಿಗಳೂ. ಭಾಷಣಗಳೂ, ಹಸ್ತ ಪತ್ರಗಳೂ ಹೊರಬಿಬಿದ್ದಿವೆ. ಈಗ ಕಡೆಯದಾಗಿ, ಕಾಂಗ್ರೆಸ್ ಪ್ರಸಿಡೆಂಟರಾದ ಶ್ರೀ ಜವಾಹರ್ ಲಾಲ್ ನೆಹರೂರವರು ಶ್ರೀ ಪಿ. ಐ. ಬೆಳ್ಳಪ್ಪನವರಿಗೆ ಬರೆದ ಒಂದು ಕಾಗದವನ್ನು ಕನ್ನಡದಲ್ಲೂ, ಇಂಗ್ಲಿಷಿನಲ್ಲೂ ಅಚ್ಚು ಹಾಕಿಸಿ, ಕೊಡಗು ಕಾಂಗ್ರೆಸ್ ಪಕ್ಷದ ಮುಂದಾಳುಗಳು ಎಲ್ಲರಿಗೂ, ಹಂಚುತ್ತಿದ್ದಾರೆ.

ಈ ಓಡಾಟ ಚಳವಳಿಗಳಲ್ಲಿ ಓಟರರಾದ ನಮ್ಮ ಜವಾಬ್ದಾರಿಕೆಯು ದಿನೇ ದಿನೇ ಹೆಚ್ಚಾಗುತ್ತಿದೆ. ನಾವು ನಮ್ಮ ಅಮೂಲ್ಯವಾದ ಓಟುಗಳನ್ನು ಕೊಡುವಾಗ್ಗೆ ಎಲ್ಲಾ ವಿಶಯಗಳನ್ನೂ ಸರಿಯಾಗಿ ವಿಮರ್ಶಿಸದೆ ಹೋದಲ್ಲು, ನಾವು ಮಹತ್ತರವಾದ ಗಂಡಾಂತರಕ್ಕೆ ಇಳಿಯಬಹುದು. ಎಲ್ಲವನ್ನೂ ಕೂಲಂಕಶವಾಗಿ ಪರಿಶೀಲಿಸಬೇಕಾಗಿದೆ

ಈಗ ನಾವು ಮುಖ್ಯವಾಗಿ ವಿಮರ್ಶಿಸ ಬೇಕಾದ ಸಂಗತಿಗಳೆಂದರೆ (೧) ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಎರಡು ಪಾರ್ಟಿಗಳು ಇದ್ದರೆ ಅವು ಯಾವ ಯಾವ ಪಾರ್ಟಿಗಳು ಮತ್ತು ಆ ಪಾರ್ಟಿಗಳ ಧ್ಯೇಯ ಯೂ ಗುರಿ ಏನಾಗಿತ್ತು. (೨) ಈಗ ಚುನಾವಣೆಗೆ ನಿಂತಿರುವವರಲ್ಲಿ ಯಾರು ಯಾವ ಪಾರ್ಟಿಗೆ ಸೇರಿದವರು. (೩) ಕೊಡಗಿನ ಭವಿಷ್ಯದ ನಿರ್ಣಯ ಮಾಡುವ ಹಕ್ಕು ಯಾರದು. ದೇಶಸ್ಥರದೋ? ಈಗ ಚುನಾವಣೆಗೆ ನಿಂತಿರುವ ಮುಂದಾಳುಗಳದೋ? ಕರ್ಣಾಟಕ ಕಾಂಗ್ರೆಸ್ ಕಮಿಟಿಯವರದೋ? ಅಲ್ಲ ಇಂಡಿಯಾ ಪಾರ್ಲಿಮೆಂಟಿನದೋ? (೪) ಕೊಡಗಿನ ಭವಿಷ್ಯದ ವಿಶಯದಲ್ಲಿ ಎಂದರೆ ಸಂಯೋಜನೆಯಾ ಪ್ರತ್ಯೇಕವಿರುವಿಕೆ ಇವುಗಳಲ್ಲಿ ಯಾವ ಅಭಿಪ್ರಾಯಕ್ಕೆ ಜನರ ಹೆಚ್ಚಿನ ಬೆಂಬಲವಿದೆ. (೫) ಈ ಚುನಾವಣೆಯಲ್ಲಿ ಯಾರಕ್ಕೋಸ್ಕರ ಕೊಡಗಿನ ಭವಿಷ್ಯದ ನಿರ್ಣಯವಾಗಬಾರದು. (೬) ನೆಹರೂರವರು ಬರೆದಿರುವ ಪತ್ರದಲ್ಲಿ ಈಗ ನಾವು ಆರಿಸಿ ಬರುವ ಮುಂದಾಳುಗಳಿಗೆ ಕೊಡಗಿನ ಭವಿಷ್ಯವನ್ನು ಕುರಿತು ನಿರ್ಣಯಿಸುವ ಯಾ ಅಭಿಪ್ರಾಯ ಸೂಚಿಸುವ ಹಕ್ಕು ಸಂಪೂರ್ಣ ಇರುವುದಿಲ್ಲವೆಂದು ನಿರ್ದಿಷ್ಟವಾಗಿ ಹೇಳಿರುವರೇ? (೭) ಈಗ ಕೊಡಗು ಕಾಂಗ್ರೆಸ್ ಪಾರ್ಟಿಯ ಹುರಿಯಾಳುಗಳೆಂದು ನಿಂತಿರುವ ಸದಸ್ಯರುಗಳು ಪ್ರತ್ಯೇಕವಾದಿಗಳೇ ಯಾ ಸಂಯೋಜನವಾದಿಗಳೇ?

ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಎರಡು ಪಾರ್ಟಿಗಳಿವೆ ಎಂಬುವುದು ನಿರ್ವಿವಾದದ ವಾತು. ದೇಶದಲ್ಲಿರುವ ಪ್ರತಿಯೊಬ್ಬನಿಗೂ ಕರ್ಣಾಟಕ

॥ ಮುಂಬರುವ ಚುನಾವಣೆ ॥

ಲೇ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

ಕಾಂಗ್ರೆಸ್ ಕಮಿಟಿಗೂ ಮತ್ತು ಇಂಡಿಯಾ ಸರಕಾರಕ್ಕೂ ಸಹ ಈ ಸಂಗತಿ ಮನವರಿಕೆ ಇದೆ. ಒಂದು ಪಾರ್ಟಿಯವರು ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟುಕೊಳ್ಳಬೇಕೆಂದೂ, ಇನ್ನೊಂದು ಪಾರ್ಟಿಯವರು ಕೊಡಗನ್ನು ಮೈಸೂರು ಯಾ ಕರ್ಣಾಟಕ ಪ್ರಾಂತ್ಯದೊಡನೆ ಸಂಯೋಜನೆ ಮಾಡಿಬಿಡಬೇಕೆಂದೂ ಇಲ್ಲಿಂದ ಹಿಡಿದು ಡೆಲ್ಲಿವರೆಗೆ ಭಾಷಣಗಳ ಮೂಲಕವೂ, ಹಸ್ತಪತ್ರಿಕೆ, ಪುಸ್ತಕ ಮತ್ತು ಮೆಮೋರಿಯಲ್‌ಗಳ ಮುಖಾಂತರವೂ, ವಿಶ್ವಪ್ರಯತ್ನ ದೂಡಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಇಷ್ಟೇ ಅಲ್ಲ. ಸಂಯೋಜನಾವಾದಿಗಳಿಗೆ ಕಳೆದ ಕೌನ್ಸಿಲಿನಲ್ಲಿ ಬಹುಮತವಿದ್ದುದರಿಂದಲೂ, ಮತ್ತು ಇವರ ಧ್ಯೇಯವನ್ನು ಕರ್ಣಾಟಕ ಕಾಂಗ್ರೆಸ್ ಕಮಿಟಿಯು ಸಂಪೂರ್ಣ ಅನುಮೋದಿಸುತಿದ್ದ ಪ್ರಯುಕ್ತ ಇವರು ಕೌನ್ಸಿಲಿನಲ್ಲಿ ಅಲ್ಪ ಸಂಖ್ಯೀಯರಾಗಿದ್ದ ಪ್ರತ್ಯೇಕವಾದಿಗಳ ಚಳವಳಿಯನ್ನು ಅಡ್ಡಗಟ್ಟಲು ಮತ್ತು ಅವರ ಬಾಯಿಯನ್ನು ಮುಚ್ಚಲು ಎಷ್ಟು ಪ್ರಯತ್ನ ತಾನೇ ಮಾಡಲಿಲ್ಲ? ಅಂತೂ ದೇವರದಯದಿಂದಲೂ ಮತ್ತು ದೇಶದ ಪ್ರತ್ಯೇಕವಾದಿಗಳೂ ಮತ್ತು ಅವರ ಮುಂದಾಳುಗಳು ಮಾಡಿದ ಸತತಪ್ರಯತ್ನದ ಫಲವಾಗಿಯೂ, ಇಂಡಿಯಾ ಸರಕಾರದ ಮುಂದಾಳುಗಳು, ಕೊಡಗಿನ ಸಂಯೋಜನೆಯನ್ನು ತತ್ಕಾಲಕ್ಕೆ ನಿಲ್ಲಿಸಿ ಹೆಚ್ಚಿನ ಸಾಧಾರಣೆಯನ್ನು ಕೊಡಲಾಗಿ ಆ ಕೊಡಲೆ ಈ ಸಂಯೋಜನವಾದಿಗಳಾಗಿದ್ದ ಮುಂದಾಳುಗಳು ಕೊಡಗಿನಲ್ಲಿ ಈಗ ಪಾರ್ಟಿಗಳಿಲ್ಲ, ನಾವೆಲ್ಲಾ ಒಂದೇ. ಆದುದರಿಂದ ಕಾಂಗ್ರೆಸು ಉಮೇದುವಾರರನ್ನೇ ಆರಿಸಬೇಕೆನ್ನುವುದರಲ್ಲಿ ಏನರ್ಥವಿದೆ. ಆಡಿದ ಮಾತುಗಳನ್ನು ಕದಿಯಬಹುದೊ? ಆದರೆ ಇವರು ಬರೆದ ಚಾತ್ಮಿಗಳನ್ನೂ ಕೊಟ್ಟ ಮೆಮೋರಿಯಲ್‌ಗಳನ್ನು ನಾಶಪಡಿಸಲು ಸಾಧ್ಯವಿದೆಯೇ? ಆದುದರಿಂದ ಈಗಿನ ಕೊಡಗಿನ ಕಾಂಗ್ರೆಸ್ ಪಾರ್ಟಿಯ ಹುರಿಯಾಳುಗಳು ಚುನಾವಣೆಯಲ್ಲಿ ಹೇಗಾದರೂ ಮಾಡಿ ಜಯಶೀಲರಾಗಬೇಕೆಂಬ ಕಾಂಕ್ಷೆಯಿಂದ ಏನೇನು ಹೇಳಿದರೂ, ಇವರು 'ಕರ್ಣಾಟಕ ಕಾಂಗ್ರೆಸ್ ಸಮಿತಿಯ ಕೈಗೊಂಬೆಗಳೇಬುವುದು ಮತ್ತು ಇವರ ಧ್ಯೇಯ ಮತ್ತು ಗುರಿ ಕೊಡಗನ್ನು ಹೇಗಾದರೂ ಮಾಡಿ, "ಬೇರೆ ಪ್ರಾಂತ್ಯದೊಡನೆ ವಿಲೀನೀಕರಿಸಿ ಬಿಡಬೇಕೆಂಬುವುದೇ ಎಂದು ಪ್ರತಿಯೊಬ್ಬ ಓಟರನಿಗೂ ಗೊತ್ತಿರುವ ಸಂಗತಿಯಾಗಿದೆ. ಅಲ್ಲದೆ ಈಗ ಕಾಂಗ್ರೆಸಿನಿಂದ ಹೊರಬಂದು ಇವರಿಗೆ ವಿರೋಧ ಪಾರ್ಟಿಯಾಗಿ ನಿಂತಿರುವ ಶ್ರೀ ಪಿ. ಐ ಬೆಳ್ಳಪ್ಪನವರ ಪಾರ್ಟಿಯವರ ಗುರಿಯು ಯಾವಾಗಲೂ ಕೊಡಗನ್ನು ಈಗಿರುವಂತೆಯೇ ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಂಡು ಪೂರ್ಣಸ್ವಾತಂತ್ರ್ಯವನ್ನು ಗಳಿಸುವುದೇ ಎಲ್ಲರಿಗೂ ಎಂಬುವುದು ಗೊತ್ತಿದೆ ಇವರಿಗೆ ಕೊಡಗಿನಭವಿಷ್ಯದ ನಿರ್ಣಯವು ವಿಶಯದಲ್ಲಿ ವಿನಹ ಇನ್ನು ಯಾವ ಕಾರಣದಲ್ಲೂ ಕಾಂಗ್ರೆಸ್ಸಿನೊಡನೆ ವಿರೋಧವಿಲ್ಲವೆಂಬ ಸಂಗತಿಯೂ ಕೊಡಗಿನ ಪ್ರತಿಯೊಂದು ವ್ಯಕ್ತಿಗೂ ಮನವರಿಕೆ ಇದೆ.

(೪) ಆದುದರಿಂದ ಕೊಡಗಿನಲ್ಲಿ ಎರಡು ಪಾರ್ಟಿಗಳಿರುವದು ನಿಜ. ಆದರಲ್ಲಿ ಈಗಿನ ಕಾಂಗ್ರೆಸ್ ಪಾರ್ಟಿಯ ಗುರಿ ಕೊಡಗಿನ ಸಂಯೋಜನೆಯೂದರೆ ಶ್ರೀ ಬೆಳ್ಳಪ್ಪನವರ ಪಾರ್ಟಿಯವರ ಗುರಿ. 'ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳುವದು' ಎಂದಾಯಿತು. ಹಾಗಾದರೆ ಈ ಗುರಿಯನ್ನು ನಿರ್ಣಯಿಸುವ ಹಕ್ಕು ಯಾರದು? ಇದು ದೇಶಸ್ಥರದು, ಎಂಬುದಕ್ಕೆ ಎರಡನೇ ಅಭಿಪ್ರಾಯವೇ ಇರಲಾರದು. ಕೊಡಗು ದೇಶವು ಕೊಡಗಿನ ಪ್ರತಿಯೊಬ್ಬ ವ್ಯಕ್ತಿಗೆ ಸೇರಿರುವುದರಿಂದ ಕೊಡಗಿನ ಭವಿಷ್ಯ ನಿರ್ಣಯವೂ, ಪ್ರತಿಯೊಬ್ಬ ವ್ಯಕ್ತಿಯದೇ ಆಗಿದೆ. ಆದರೆ ಇಂಥಾ ಮಹತ್ತರವಾದ ವಿಷಯಗಳಲ್ಲಿ ಪ್ರತಿಯೊಬ್ಬನಿಗೂ, ಯೋಚಿಸಿ ಒಂದು ನಿರ್ಣಯಕ್ಕೆ ಬರುವಷ್ಟು ತಿಳುವಳಿಕೆ ಇರಲಾರದು. ಅಂಥಾ ಸಮಯದಲ್ಲಿ ವಿದ್ಯಾವಂತರೂ, ತಿಳುವಳಿಕೆ ಇರುವವರೂ ಮತ್ತು ಮುಂದಾಳುಗಳೂ ಈ ಸಮಸ್ಯೆಯನ್ನು ಓಟರುಗಳಿಗೆ ವಿಷದವಾಗಿ ವಿವರಿಸಿ. ಅವರ ಒಪ್ಪಿಗೆಯನ್ನು ಒಂದಲ್ಲ ಒಂದು ಸಮಯ ಪಡೆಯಬೇಕು. ಹಾಗ್ಗೆ ವಿವರಿಸಿದನಂತರ ಓಟರುಗಳು ತಮ್ಮ ಅಭಿಪ್ರಾಯದಂತೆ ತಮ್ಮ ಮುಂದಾಳುಗಳನ್ನು ಚುನಾಯಿಸುತ್ತಾರೆ. ಆ ಮೇಲೆ ಈ ಮುಂದಾಳುಗಳು ತಮ್ಮ ಆ ಅಭಿಪ್ರಾಯಗಳನ್ನು ವಿಷಧ ಪಡಿಸಬಹುದು. ಆಂತೂ ದೇಶದ ಭವಿಷ್ಯದ ನಿರ್ಣಯದ ಮೂಲ ಭೂತ ಹಕ್ಕು ಓಟರುಗಳಲ್ಲವೆ ಈಗ ನಿಂತಿರುವ ಉಮೇದುವಾರರದಾಗಲೀ ಯಾ ಕರ್ನಾಟಕ ಕಾಂಗ್ರೆಸ್ ಕಮಿಟಿಯವರದಾಗಲೀ ಯಾ ಇಂಡಿಯಾ ಸರಕಾರದವರದಾಗಲೀ ಅಲ್ಲ. ಓಟರುಗಳು ಆವರವರ ಅಭಿಪ್ರಾಯಗಳನ್ನು ತಮ್ಮ ಮುಂದಾಳುಗಳನ್ನು ಚುನಾಯಿಸುವುದರಲ್ಲಿ ವ್ಯಕ್ತಿಪಡಿಸಿದ ನಂತರ, ಮುಂದಾಳುಗಳು ಓಟರುಗಳ ಪರವಾಗಿ ದೇಶದ ಮುಂದಿನ ಪರಿಸ್ಥಿತಿಯನ್ನು ನಿರ್ಣಯಿಸಬಹುದು. ಸ್ಥಿತಿಯು ಹೀಗಿರುವಾಗ ಕಾಂಗ್ರೆಸ್ಸಾಗಲೀ, ಯಾ ಅವರು ನಿಲ್ಲಿಸಿದವ ಹುರಿಯಾಳುಗಳಾಗಲೀ ಈ ಚುನಾವಣೆಯಲ್ಲಿ ದೇಶದ ಭವಿಷ್ಯದ ನಿರ್ಣಯದ ಪ್ರಶ್ನೆಯನ್ನು ಓಟರ ಗಳ ಮುಂದಿಡಕೂಡದು' ಎಂದು ಹೇಳುವ ಅಧಿಕಾರವಿಲ್ಲಿಡೆ ಯೂ ಅವಶ್ಯವೇನಿದೆ. ಮುಂದಾಳುಗಳನ್ನು ಆರಿಸುವುದು ಓಟರುಗಳ ಹಕ್ಕು, ಅವರು ಯಾವ ಯಾವ ಪ್ರಶ್ನೆಗಳ ಮೇಲೆ ಅಥವಾ ಯಾವ ಧ್ಯೇಯ, ಯಾ ಗುರಿಗಳನ್ನು ಮುಂದಿಟ್ಟುಕೊಂಡು, ತಮ್ಮ ಮುಂದಾಳುಗಳನ್ನು ಆರಿಸುತ್ತಾರೆ ಎಂಬದನ್ನು ನಿರ್ಣಯಿಸುವ ಹಕ್ಕು ಓಟರುಗಳಿಗಿರುವದಲ್ಲದೆ ಬೇರೆ ಯಾರಿಗಿದೆ?

ಅಷ್ಟೇ ಅಲ್ಲ; ಚುನಾವಣೆಯು ಇನ್ನೂ ಬರಲಿಕ್ಕಿದೆ. ಕೊಡಗಿನ ಭವಿಷ್ಯದ ನಿರ್ಣಯವು, ಇಂದಲ್ಲ ನಾಳೆಯಾದರೂ ಆಗಿಯೇ ತೀರಬೇಕಾಗಿದೆ. ಹಾಗಿರುವಾಗ್ಗೆ ಈ ಪ್ರಶ್ನೆಯು ಈ ಚುನಾವಣೆಗೆ ಅಗತ್ಯವಿಲ್ಲದ ವಿಚಾರ, ಕೇವಲ ಅಸಂಬಂಧ ಮತ್ತು ಅವಿವೇಕ ಎಂಬುವುದರ ಅರ್ಥವೇನು? ಅಂತೂ ಇಂತೂ, ಚುನಾವಣೆಯಾಗುತ್ತಿದೆ. ಈ ಚುನಾಯಿತ ಮೆಂಬರರು ದೇಶದ ಆಡಳಿತವನ್ನು ಕೈಗೆ ತೆಗೆದುಕೊಳ್ಳುತ್ತಾರೆ. ಮತ್ತು ಈ ಪ್ರಾಂತ್ಯದ ಭವಿಶ್ಯವು ಇಂದಲ್ಲ ನಾಳೆ ಆಗಿಯೇ ತೀರಬೇಕು ಎಂದ ಮೇಲೆ, ಈಗಾಗಲೇ ಆ ಪ್ರಶ್ನೆಯನ್ನೂ ಓಟರರ ಮುಂದಿಟ್ಟು ಅವರ ಆಭಿಮತವನ್ನು ಕೇಳುವುದರಲ್ಲಿ ಆಗುವ ಬಾಧಕವೇನು? ಒಂದೇ ಗುಂಡಿನಿಂದ ಎರಡು ಪಕ್ಷಿಗಳು ಬಿದ್ದರೆ, ಕಾಂಗ್ರೆಸಿನವರಿಗೆ ಆಗುವ ನಷ್ಟ, ಯಾ ದಕ್ಕೆಯಾದರೂ ಯಾವುದು? ಯಾತಕ್ಕೋಸ್ಕರ, ಕಾಂಗ್ರೆಸು ಪಾರ್ಟಿಯವರು ಈ ಪ್ರಶ್ನೆಯನ್ನೇ ಓಟರರ ಮುಂದಿಡಲು ಬಿಡಬಾರದೆಂದು ಇಷ್ಟೊಂದು ಪ್ರಯತ್ನ ಮಾಡುತ್ತಿದ್ದಾರೆ? ಈ ಪ್ರಶ್ನೆಯು ಚುನಾವಣೆಯಲ್ಲೇ ಬಗೆಹರಿದರೆ ಅದರಿಂದ ಮುಂದಕ್ಕೆ ನಮ್ಮ ಸರಕಾರಕ್ಕೆ ಈ ಅಭಿಪ್ರಾಯವನ್ನು ತೆಗೆಯಲು ವೆಚ್ಚ ನೂಡಬೇಕಾದ ಸಾವಿರಾರು ರೂಪಾಯಿಗಳ ಖರ್ಚು ಉಳಿವರಿಯೂಗುವುದಲ್ಲದೆ, ಓಟರುಗಳಿಗೂ ಸಹ ತಮ್ಮ ಕೆಲಸಗಳನ್ನು ಬಿಟ್ಟು ಇನ್ನೊಮ್ಮೆ ಓಡಿಯಾಡಬೇಕಾದ ತೊಂದರೆಯೂ ತಪ್ಪುವುದು. ಅಷ್ಟೇ ಅಲ್ಲ, ಮುಂಬರುವ ಮಂತ್ರಿಗಳಿಗೂ ಸಹ ದೇಶದ ಮುಂದುವರಿಯುವಿಕೆಯ ಕುರಿತು ಮಾಡಬೇಕಾದ ಪಂಚವಾರ್ಷಿಕ ಯಾ ದಶವಾರ್ಷಿಕ ಯೋಜನೆಗಳನ್ನು ನಿರ್ಣಯಿಸಲು ಸಹ ಸಹಾಯವಾಗುತ್ತದೆ. ಆದರ ಬದಲು, ಈ ಪ್ರಶ್ನೆಯನ್ನು ಈಗಿರುವಂತೆ ಪುನಃ ಗಾಳಿಯಲ್ಲಿ ತೇಲಲುಬಿಟ್ಟಲ್ಲಿ, ಈ ಮಂತ್ರಿಗಳಿಗೂ ಸಹ ಮುಂದಿನ ನಿರ್ಣಯವು ತಿಳಿಯದಿರುವುದರಿಂದ, ಏನೊಂದು ಆರ್ಥಿಕ ಮುಂದುವರಿಕೆಯ ಯೋಜನೆಗಳನ್ನು ಕೈಕೊಳ್ಳಲು ಧೈರ್ಯವಿಲ್ಲದೆ ಈಗಿನ ಸರಕಾರವನ್ನೇ ಮುಂದುವರಿಸುತ್ತಾ ಹೋಗಬಹುದೇ ಹೊರತು ಏನೊಂದು ವಿಶೇಷ ಕಾರ್ಯವನ್ನು ಮಾಡಲಾರರು. ಆದುದರಿಂದ ಈ ಪ್ರಶ್ನೆಯನ್ನು ಈಗಲೇ ಬಗೆಹರಿಸುವುದು. ಉತ್ತಮ.

(೫) ಈಗಿರುವ ಎರಡು ಪಾರ್ಟಿಗಳಲ್ಲಿ, ಯಾವ ಪಾರ್ಟಿಗೆ ದೇಶದ ಓಟರ ಗಳ ಹೆಚ್ಚಿನ ಬೆಂಬಲವಿದೆ, ಎಂಬ ವಿಷಯದಲ್ಲಿ ಪ್ರತ್ಯೇಕವಾದಿಗಳಿಗೇ ಹೆಚ್ಚಿಗೆ ಬೆಂಬಲವಿರುವುದು ಎಂಬದನ್ನು ವಿಮರ್ಶಿಸಿ ಹೇಳಬೇಕಾಗಿಲ್ಲ. ಸಂಯೋಜನವಾದಿಗಳ ಹಿಂದಿನ ಮತ್ತು ಈಗಿನ ನಡಾವಳಿಕೆಗಳಿಂದಲೇ ಇದನ್ನು ದೃಢೀಕರಿಸಬಹುದು. ಇವರು ಕೊಡಗನ್ನು ಬೇರೆ ಪ್ರಾಂತ್ಯದೊಡನೆ ವಿಲೀನೀಕರಿಸಲು ಪ್ರಯತ್ನಪಡುತ್ತಿರುವಾಗಲೂ, ಈ ಸಮ್ಬಂಧ ನಾನಾತರದ ಮೆಮೋರಿಯಲ್ ಮತ್ತು ಸಾಕ್ಷ್ಯಗಳನ್ನು, ಕಾಂಗ್ರೆಸಿಗೂ, ಇಂಡಿಯಾ ಸರಕಾರಕ್ಕೂ ಕೊಡುತ್ತಿದ್ದಾಗಲೂ ಜನರ ಅಭಿಪ್ರಾಯವನ್ನು ತಿಳಿಯಲು ಎಂದೂ ಪ್ರಯತ್ನಪಟ್ಟಿದೇ ಇಲ್ಲ. ಯಾಕೆಂದರೆ, ಹಾಗೆ ಮಾಡಿದರೆ ಇವರಿಗೆ ದೇಶದಲ್ಲಿ ಬೆಂಬಲಸಿಕ್ಕ

ವಷ್ಟಿಲ್ಲ ಏಕೆಂಬುವುದು ಗೊತ್ತಿತ್ತು. ಅಷ್ಟೇ ಅಲ್ಲ, ಇವರು ಕೊಟ್ಟ ಒಂದೂ ವೆಮೋರಾಂಡಂನಲ್ಲಿ ಹೀಗೆ ಬರೆದದನ್ನು ನಾನು ಓದಿದ ಜ್ಞಾಪಕ ನನಗಿದೆ ಇಂಥಹ ಮಹತ್ತರವಾದ ಸಮಸ್ಯೆಗಳನ್ನು ಬಗೆಹರಿಸುವಾಗ್ಯೆ (ಎಂದರೆ ದೇಶವನ್ನು ಪ್ರತ್ಯೇಕವಿಡಬೇಕೋ ಯೂ ದೊಡ್ಡ ಪ್ರಾಂತ್ಯ ದೊಡನೆ ಸೇರಿಸಿಬಿಡಬೇಕೋ ಎಂಬ ವಿಷಯಗಳಲ್ಲಿ) ದೇಶದ ಸಾಮಾನ್ಯ ಜನರ ಅಭಿಪ್ರಾಯ ಕೇಳುವುದು ಸರಿಯಲ್ಲ. ಹೆಚ್ಚು ತಿಳುವಳಿಕೆ ಇಲ್ಲದ ಅವರು—ತಾವು ಇದ್ದಲ್ಲೇ ಇರುವುದು ಒಳ್ಳೆಯದು ಎಂದು ಭಾವಿಸುವುದರಿಂದ ಅಂತಹ ಬದಲಾವಣೆಗೆ ಒಪ್ಪುವುದಿಲ್ಲ. ಅದುದರಿಂದ ಇಂಡಿಯಾ ಸರಕಾರದ ಮುಂದಾಳುಗಳೇ ಕೊಡಗಿನ ಮುಂದಿನ ಏಳಿಗೆಯನ್ನು ಬಯಸಿ, ದೇಶವನ್ನು ಜನರ ಅಭಿಮತ ಕೇಳದೆಯೇ ಬೇರೆ ಪ್ರಾಂತ್ಯಕ್ಕೆ ಸೇರಿಸಿ ಬಿಡಬೇಕು' ಎಂದು ಬರೆದಿದ್ದರು. ಅಲ್ಲದೆ ಪ್ರತ್ಯೇಕವಾದಿಗಳು ಸಹ ಈ ವಿಷಯದಲ್ಲಿ ದೇಶದಲ್ಲಿ ಚಳವಳ ಎಬ್ಬಿಸದಂತೆ ಮಾಡಲು, ಈ ವಿಷಯ ಯಾರೂ ಯಾವ ವಿಂಟಿಂಗಿನಲ್ಲೂ ನೂಕಾಡಕೂಡದು. ಎಂಬ ನಿರ್ಬಂಧದ ಆರ್ಡರನ್ನು ಕೆ. ಪಿ. ಸಿ. ಸಿಯವರಿಂದ ಮಾಡಿಸಿದರು. ಕೊಡಗು ಪ್ರಾಂತೀಕ ಕಾಂಗ್ರೆಸ್ ಕಮಿಟಿಯಲ್ಲಿ, ಪ್ರತ್ಯೇಕವಾದಿಗಳಿಗೆ ಹೆಚ್ಚಿನ ಮೆಜಾರಿಟಿ ಇದ್ದುದರಿಂದ, ಕರ್ನಾಟಕ ಕಾಂಗ್ರೆಸ್ ಕಮಿಟಿಯವರು, ನಿಷ್ಕಾರಣವಾಗಿ ಈ ಕೊಡಗು ಕಮಿಟಿಯನ್ನು ರದ್ದು ಮಾಡಿ, ಸಂಯೋಜನಾವಾದಿಗಳಿಂದ ಕೂಡಿದ ಒಂದು ಎಡ್‌ಹಾಕ್ ಕಮಿಟಿಯನ್ನು ನೂಡಿ, ಸುಮಾರು ಐದು ವರ್ಷಗಳ ವರೆಗೆ ಈ ಕಮಿಟಿಯನ್ನು ಬದಲಾಯಿಸದೆಯೂ ಚುನಾವಣೆಯನ್ನು ಮಾಡದೆಯೂ ಕಾಲ ತಳ್ಳಿದರು.

ಇಷ್ಟು ಕಲ್ಲುಮುಳ್ಳುಗಳನ್ನು ಪ್ರತ್ಯೇಕವಾದಿಗಳ ದಾರಿಗೆ ಅಡ್ಡ ತಂದುದು ಸಾಲದ್ದೆಂ ಈ ಮುಂಡಾಳುಗಳು, ಈಗಲೂ ಅವರಿಗೆ ದೇಶಭ್ರಷ್ಟರ ಬೆಂಬಲ ದೊರೆಯುವುದಿಲ್ಲವೆಂಬ ಸಂಗತಿ ಮನವರಿಕೆ ಇರುವುದರಿಂದಲೇ ಇಷ್ಟರ ವರೆಗೆ ಕೊಡಗನ್ನು ವಿಲೀನೀಕರಿಸಲು, ಅಕಾಶ ಭೂಮಿಗಳನ್ನು ಅಲ್ಲಾಡಿಸಲು ಪ್ರಯತ್ನಪಟ್ಟ ಈ ಮಹನೀಯರೂ, ಈಗ ಏಕಾಏಕಿ, ಓಟರುಗಳ ಮುಂದೆ ನಿಂತು, ಏನೂಂದು ಸಂಕೋಚವಿಲ್ಲದೆ, 'ನಾನೂ ಪ್ರತ್ಯೇಕವಾದಿ. ನನಗೆ ಓಟುಕೊಡಿ' ಎಂದು ಕೇಳುತ್ತಿದ್ದಾರೆ. ಇದರಿಂದ, ಇವರ ಧ್ಯೇಯ, ಯೂ ಗುರಿಯೂದ ಸಂಯೋಜನೆಯಲ್ಲಿ ಇವರಿಗೇ ನಂಬಿಕೆ ಇಲ್ಲ' ಎಂಬುವುದು ನಿರ್ಧಿಷ್ಟವಾಗುತ್ತದೋ, ಇಲ್ಲವೇ ಇಂದು ಇವರು ಓಟರುಗಳನ್ನು ವಂಚಿಸಿ, ಅವರ ಬೆಂಬಲವನ್ನು ಸೂರಿಗೊಳ್ಳಲು ಮಾಡುವ ಕುಟಿಲ ಪ್ರಯತ್ನವೆಂದೆ, ಅದನ್ನು ಯಾರೂ ತಪ್ಪೆಂದು ಹೇಳಲಾರರೂ. ಅಂತೂ ಇಂತೂ, ಈ ಸಂಯೋಜನವಾದಿಗಳ ನಡಾವಳಿಕೆಯಿಂದಲೇ, ಪ್ರತ್ಯೇಕವಾದಕ್ಕಲ್ಲದೆ ಸಂಯೋಜನವಾದಕ್ಕೆ ದೇಶದಲ್ಲಿ ಹೆಚ್ಚಿನ ಬೆಂಬಲವಿಲ್ಲವೆಂಬುವುದು ಸಂಪೂರ್ಣ ರುಜುವಾತು ವಾದಂತಾಯಿತು.

ಆದು ದರಿಂದಲೇ ಕಾಂಗ್ರೆಸ್ ಪಾರ್ಟಿಯವರು ಈ ಪ್ರಶ್ನೆಯನ್ನು ಈಗ ಓಟರರ ಮುಂದಿಡಬಾರದು ಎಂದು ವಿಶ್ವಪ್ರಯತ್ನ ಮಾಡುತ್ತಿದ್ದಾರೆ.

೬. ನೆಹರೂರವರು ಬರೆದ ಕಾಗದದಲ್ಲಿ ಇವರು ಈ ಪ್ರಶ್ನೆಯನ್ನು ಈಗ ಓಟರರ ಮುಂದಿಡುವ ಅವಶ್ಯಕತೆ ಇಲ್ಲವೆಂಬುದಾಗಿ ಹೇಳಿದರೂ, ಮುಂದೆ ನಾವು ಚುನಾಯಿಸುವ ಕೌನ್ಸಿಲಿಗೆ ದೇಶದ ಭವಿಷ್ಯದ ವಿಷಯ ಅಭಿಪ್ರಾಯಕೊಡುವ ಯೂ ಮೂಕಾಡುವ ಹಕ್ಕು ಇಲ್ಲವೇ ಇಲ್ಲವೆಂಬಂದು ನಿರ್ಧಿಷ್ಟವಾಗಿ ಹೇಳುವುದಿಲ್ಲ. ಅವರು ಹೇಳುವ ಮಾತಿದು. 'ಕೊಡಗಿನ ಎಸೆಂಬ್ಲಿಗೆ ಯಾವುದಾದರೂ ವಿಚಾರ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಇರುವುದು ಸಹಜ.' ಎಂದು ಹೇಳುತ್ತಾ, ಆ ಮೇಲೆ 'ಆದರೆ ಈಗಿನ ಪರಿಸ್ಥಿತಿಯು ಬಲವತ್ತರದ ಕಾರಣದಿಂದ ಈ ಪ್ರಶ್ನೆಯು ಮುಂದೂಡಲ್ಪಟ್ಟು, ಇದೊಂದು ಚುನಾವಣೆಯ ಪ್ರಶ್ನೆಯಾಗದಿದ್ದಲ್ಲಿ ಇವನ್ನು ಕುರಿತು ಹೊಸ ನ್ಯಾಯವಿಧಾಯಕ ಸಭೆಯು ಕೊಡುವ ಯಾವ ಅಭಿಪ್ರಾಯಕ್ಕೂ ಹೆಚ್ಚು ಬೆಲೆ ದೊರೆಯಲಾರದು' ಎಂದೂ ಬರೆದಿದ್ದಾರೆ. ಇದರ ಬದಲು ಅವರು ನಿರ್ದಿಷ್ಟವಾಗಿ 'ಎಸೆಂಬ್ಲಿಗೆ ಕೊಡಗಿನ ಭವಿಷ್ಯದ ವಿಷಯ ಅಭಿಪ್ರಾಯಕೊಡುವ ಅಧಿಕಾರ ಇರುವುದಿಲ್ಲ ಎಂಬುದಾಗಿ ಬರೆಯಬಹುದಿತ್ತು. ಆದರೆ ಅವರು ಹಾಗೆ ಬರೆದಿಲ್ಲ. 'ಈ ಪ್ರಶ್ನೆಯು ಇಂದಿನ ಪರಿಸ್ಥಿತಿಯಿಂದ ಮುಂದೂಡಲ್ಪಟ್ಟರೆ ಯೂ ಇದೊಂದು ಚುನಾವಣೆಯ ಪ್ರಶ್ನೆಯಾಗದ ದ್ದಲ್ಲಿ, ಮೂತ್ರ ಈ ಸಭೆಯು ಕೊಡುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇರಲಾರದು' ಎಂದು ಹೇಳುತ್ತಾರೆ. ಇದರಿಂದ 'ಇಂದಿನ ಪರಿಸ್ಥಿತಿಯು ಬಲವತ್ತರ ಇತ್ತೆಂಬುವುದನ್ನಾಗಲೀ ಇರಲಿಲ್ಲವೆಂಬುದನ್ನಾಗಲೀ ಆ ಮೇಲೆ ರುಜುವಾತು ಮಾಡುವವರು ಯಾರು? ಆಲ್ಲದೆ ಇಷ್ಟು ಚಳವಳಿಯಾದ ಮೇಲೆ ಒಂದು ವೇಳೆ ಸಂಯೋಜನಾ ಪಾರ್ಟಿಯವರೇ ಮೆಜಾರ್ಟಿಯಾದಲ್ಲು, ಈ 'ಪ್ರಶ್ನೆ ಚುನಾವಣೆಯಲ್ಲಿ ಒಂದಿರಲಿಲ್ಲ' ಎಂದು ಹೇಳುವುದಾದರೂ ಹೇಗೆ? ಆಸ್ತೇ ಅಲ್ಲ, ಒಂದು ವೇಳೆ ಕಾಂಗ್ರೆಸೇ ಈ ಚುನಾವಣೆಯಲ್ಲಿ ಜಯಶೀಲವಾಗದಿದ್ದರೆ, ನೆಹರೂರವರ ಈ ಪತ್ರಕ್ಕೆ ಆಗ್ಗೆ ಇರುವ ಸರಕಾರದವರು ಬೆಲೆ ಕೊಡುವರೆಂಬ ಆಧಾರವೇನು?

ಇಷ್ಟೆಲ್ಲಾ ತೊಂದರೆ ಯೂ ವಾದವೇ ತಕ್ಕೆ ಈ ಚುನಾವಣೆಯಲ್ಲಿ ಈ ಪ್ರಶ್ನೆಯನ್ನೇ ಮುಂದು ಮಾಡಿಕೊಂಡು ಚುನಾವಣೆಯನ್ನು ನಡಿಸಿದರೆ ಅದರಿಂದ ಕಾಂಗ್ರೆಸಿಗೆ ಆಗುವ ತೊಂದರೆ ಏನೂ ಇಲ್ಲದರಿಂದ ಓಟರುಗಳಾದ ನಾವು ಈ ಪ್ರಶ್ನೆಯನ್ನು ಮುಂದುವರಿಸಬೇಕಾದ ಯಾವದೊಂದು ಅವಶ್ಯಕತೆಯೂ ನನಗೆ ಕಂಡು ಬರುವುದಿಲ್ಲ. ಆದರ ಬದಲು ಈ ಪ್ರಶ್ನೆಯ ಮೇಲೆಯೇ ಮುಂದಾಳುಗಳನ್ನು ಆರಿಸುವುದು ಉತ್ತಮ.

ಕಡೆಯದಾಗಿ ಈ ಸಂಯೋಜನಾವಾದಿಗಳು, ಇಷ್ಟರ ವರೆಗೆ ಹೇಳುತ್ತಿದ್ದುದು 'ಕೊಡಗಿನ ಈಗಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಿತ ಸರಕಾರವನ್ನು ನಡೆಸಲು ಎಂದಿಗೂ ಸಾಧ್ಯವಿಲ್ಲ. ಆದುದರಿಂದ ಕೊಡಗು ಬೇರೆ ಪ್ರಾಂತ್ಯದೊಡನೆ ವಿಲೀನವಾಗಲೇಬೇಕು' ಎಂದು. ಈಗ ಇಂಡಿಯಾ ಸರಕಾರವು ಕೊಡಗಿಗೆ ಸುಧಾರಣೆಯನ್ನು ಮಾತ್ರ ಕೊಟ್ಟಿರುವುದಲ್ಲದೆ ಆರ್ಥಿಕ ಸಹಾಯವನ್ನು ಕೊಟ್ಟಿಲ್ಲ. ಹಾಗಿರುವಾಗ್ಯೆ ಕೊಡಗಿನ ಇದೇ ಹುಟ್ಟುವಳಿಯಿಂದ ಈ ಸುಧಾರಿತ ಸರಕಾರವನ್ನು ನಾವು ನಡಿಸುತ್ತೇವೆ" ಎಂದು ಇವರು ಮುಂದೆ ಬಂದಿದ್ದರ ಅರ್ಥವೇನು? ಇವರು ಮೊದಲು ಹೇಳಿದ ಮಾತನ್ನು ಮರೆತು ಬಿಟ್ಟರೇ? ಅಲ್ಲ, ಪ್ರತ್ಯೇಕವಾದಿಗಳನ್ನು ಅಧಿಕಾರಕ್ಕೆ ಬಿಟ್ಟರೆ ಇವರು ಈ ಉಟ್ಟಾವಳಿಯಿಂದಲೇ ಜನರಿಗೆ ತೃಪ್ತಿಕರವಾದ ಸರಕಾರವನ್ನು ನಡೆಸಿ, ಮುಂದಕ್ಕೆ ನಮಗೆ ಕಂಯೋಜನಕ್ಕೆ ದಾರಿಯೇ ಇಲ್ಲದ ಹಾಗೆ ಮಾಡಿಯಾರು, ಆದುದಂದ ನಾವು ಹೇಗಾದರೂ ಮಾಡಿ ಅಧಿಕಾರವನ್ನು ಸಂಪಾದಿಸಿ ಈ ಆರ್ಥಿಕ ಸ್ಥಿತಿಯಲ್ಲಿ ಕೊಡಗು ಪ್ರತ್ಯೇಕವಿರಲಾರದು ಎಂಬ ರೀತಿಯಲ್ಲಿ ಸರಕಾರದ ಹಣವನ್ನು ಕಂಡ ರೀತಿಯಲ್ಲಿ ಸೂರಿ ಮಾಡಿ, ತಾವು ಹಿಡಿದ ಹಟದಂತೆ ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿಯೇ ಬಿಡಬೇಕೆಂದೋ? ಹಾಗಿದ್ದರೆ, ಇವರ ಅಭಿಪ್ರಾಯ ಬಹು ನೀಚತರದೆಂದೇ ಭಾವಿಸಬೇಕಾಗುತ್ತದೆ.

ಏನೇ ಇರಲಿ, ಓಟರುಗಳು ತಮ್ಮ ಓಟುಗಳನ್ನು ಈ ಚುನಾವಣೆಯಲ್ಲಿ ಕೊಡುವಾಗ ಈ ಎಲ್ಲಾ ಸಂಗತಿಳನ್ನು ಮನಸ್ಸಿಗೆ ತೆಗೆದುಕೊಂಡು, ನೆಂಟರು, ಜಾತಿಯಷ್ಟ, ಸ್ನೇಹಿತ, ಎಂಬಕಾರಣಗಳಿಗೆ ಮರುಳಾಗದೆ ದೇಶವನ್ನು ಪ್ರತ್ಯೇಕ ಇಡಲು ಪ್ರಯತ್ನ ಪಟ್ಟ ಮತ್ತು ಈಗಲೂ ಪ್ರಯತ್ನ ಪಡುತ್ತಿರುವವರಿಗೆ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಟ್ಟು ಅವರನ್ನೆ ಜಯಶೀಲರನ್ನಾಗಿ ಮಾಡುವುದು ನನಗೆ ಒಳ್ಳೆಯ ದಾಗಿ ಕಾಣುತ್ತೆ. ಒಂದು ದೇಶದ ಚರಿತ್ರೆಯಲ್ಲಿ ೫ ವರ್ಷಗಳು ಬಹಳ ಕೊಂಚ ಸಮಯವೆಂದೇ ಭಾವಿಸಬೇಕಾಗಿದೆ. ಈ ಕಿಂಚಿತ್ ಕಾಲದಲ್ಲಿ ಪ್ರತ್ಯೇಕವಾದಿಗಳು ಕೊಡಗನ್ನು ಪ್ರತ್ಯೇಕ ಇಟ್ಟು ಕೊಳ್ಳಲು ಸಾಧ್ಯವಿದೆ ಎಂಬುದನ್ನು ಜನರಿಗೆ ಮನದಟ್ಟು ಮಾಡಿದ್ದರೆ ಆ ಮೇಲೆ ಬೇಕಾದರೆ ಸಂಯೋಜನೆಯೂಗಬಹುದಷ್ಟೆ. ಅಷ್ಟರಲ್ಲಿ ಲೋಕವು ಮುಳುಗಿ ಹೋಗುವುದಿಲ್ಲ. ಅಕಾಶವೂ ಬಿದ್ದೂ ಬಿಡಲಾರದು.

ಬೇಕಾಗಿವೆ.

ಗರಿಗಳು:—ಕಾಡುಕೋಳಿಯ ಕುತ್ತಿಗೆಯಲ್ಲಿರುವ ಗರಿಗಳು ಪ್ರತಿಯೊಂದಕ್ಕೆ ರೂ. ೧–೮–೦ಯ ದರದಲ್ಲಿ, ನೀರುಬಾತಿನ ಗರಿಗಳು ಪೌಂಡಿಗೆ ೪ ಆಣೆಯ ದರದಲ್ಲಿ ಬೇಕಾಗಿವೆ.

D. H. THANGAM & Co.,
43, P. V. Koil Street,
Royapuram, Madras.
2–2

ಕ್ರಯಕ್ಕೆ ದೊರೆಯುತ್ತೆ !

(ಬಹಳ ಅಚ್ಚುಕಟ್ಟಾದ ಮನೆ)

ಮಡಿಕೇರಿಯಲ್ಲಿ, ಬ್ರಾಹ್ಮಣರ ಬೀದಿಯ ಠಸ್ತೆ ಬಾಜಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಒಳ್ಳೇ ಗಾಳಿ ಬೆಳಕಿಗೆ ಅನುಕೂಲವಾಗಿರುವ ಮತ್ತು ಶುದ್ಧವಾದ ನೀರು ಉಳ್ಳ ಸೇದುಬಾವಿಯನ್ನೊಳಗೊಂಡಿರುವ ಮಂಗಳೂರು ಹಂಚಿನ ದೊಡ್ಡ ಮನೆ ಮೂರಾಟಕ್ಕಿದೆ. ಕ್ರಯ ರೂಪಾಯಿ 16,000/—

ಹೆಚ್ಚಿನ ವಿಷಯಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿ, ಆಥವಾ ಬರೆಯಿರಿ.

ಹೆಚ್. ವಿ. ರಾಮಕೃಷ್ಣ,
ಬ್ರಾಹ್ಮಣರ ಬೀದಿ,
4–4 ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕೆತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲು ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.